ಶುಭತಮಚರಿತರಾದ, ಲಕ್ಷ್ಮೀಸಮೇತನಾದ ನಾರಾಯಣನನ್ನು ಸೇವಿಸಿ– ದವರೂ, ಶಾಂತರೂ, ದಾಂತರೂ, ಮಹಾತ್ಮರೂ, ಗುರುಗುಣಭರಿತರೂ, ಯೋಗಿ– ಸಮೂಹಸಮೇತರೂ, ಕಾಮಕ್ರೋಧಾದಿಗಳನ್ನು ಅತಿಕ್ರಮಿಸಿದವರೂ, ಕುಮತಿಗಳ ಸಂಬಂಧರಹಿತರೂ, ದುರ್ವಾದಿಗಳನ್ನು ಗೆದ್ದವರೂ, ಪಾಪಾಂಬುಧಿಯನ್ನು ದಾಟಿಸಲು ತೆಪ್ಪದಂತೆ ಇರುವವರೂ, ಧೀರರೂ, ಭೂಸುರರಿಂದ ಗೀತರೂ, ಸುಜನರಿಂದ ಮಹಿತರೂ, ಶ್ಲಾಘ್ಯವಾದ ಜ್ಞಾನವುಳ್ಳವರೂ, ವಿನೀತರೂ ಆದ, ಬ್ರಹ್ಮಣ್ಯತೀರ್ಥರನ್ನು ವಂದಿಸುತ್ತೇನೆ.

ಮಾದ್ಯನ್ಮಾಯಿಗಜೇಂದ್ರಪಂಚವದನಃ ಪ್ರಖ್ಯಾತಕೀರ್ತಿರ್ಮಹಾನ್ ।
ಶ್ರೀಮದ್ವಿಟ್ಠಲಪಾದಪದ್ಮಮಧುಪಃ ಸರ್ವೇಷ್ಟಚಿಂತಾಮಣಿಃ ॥
ನಿರ್ವ್ಯಾಜೋರುದಯಾಕಟಾಕ್ಷಲಸಿತೋ ಜ್ಞಾನಾದಿಭಾಗ್ಯೋಜ್ವಲಃ ।
ಶ್ರೀಬ್ರಹ್ಮಣ್ಯಯತೀಂದ್ರಮಸ್ತಕಮಣಿಃ ಪಾಯಾದಪಾಯಾತ್ಸ ಮಾಂ । ೨ ।

ಮದಿಸಿದ ಮಾಯಾವಾದಿಗಳೆಂಬ ಗಜೇಂದ್ರಗಳಿಗೆ ಸಿಂಹಸದೃಶರೂ, ಪ್ರಖ್ಯಾತಕೀರ್ತಿವಂತರೂ, ಉತ್ತಮರೂ, ಶ್ರೀಮದ್ವಿಟ್ಠಲನ ಪಾದಕಮಲ ಭೃಂಗಾಯ– ಮಾನರೂ, ಸರ್ವರ ಇಷ್ಟವನ್ನು ನೆರವೇರಿಸುವ ಚಿಂತಾಮಣಿಗಳೂ, ನಿರ್ವ್ಯಾಜವೂ ಪೂರ್ಣವೂ ಆದ ಕೃಪಾಕಟಾಕ್ಷದಿಂದ ಶೋಭಿತರೂ, ಜ್ಞಾನಾದಿ ಸಂಪತ್ತುಗಳಿಂದ ಪ್ರಕಾಶಮಾನರೂ ಆದ ಶ್ರೀಬ್ರಹ್ಮಣ್ಯತೀರ್ಥಯತೀಂದ್ರ ಶಿರೋಮಣಿಗಳು ನನ್ನನ್ನು ಅಪಾಯಗಳಿಂದ ಪಾರುಮಾಡಲಿ.

ಬಿಭ್ರತ್ಕಾಷಾಯಚೇಲಂ ವಿಲಸಿತತುಲಸೀಪಂಕಜಾಕ್ಷಾದಿಮಾಲಂ ।
ಧೂತಾ ಜ್ಞಾನಾಘಜಾಲಂ ಮೃದುವಚನಕಲಂ ಚಾರುಸೌಂದರ್ಯಶೀಲಂ ॥
ಆರ್ತತ್ರಾಣೈಕಲೋಲಂ ಪ್ರಣತಮುನಿಕುಲಂ ವೈಷ್ಣವಾಗ್ರ್ಯಾನುಕೂಲಂ ।
ಬ್ರಹ್ಮಣ್ಯಾರ್ಯಂ ದಯಾಲುಂ ಸ್ಮಿತಮುಖಕಮಲಂ ಸಾದರಂ ತಂ ಭಜೇಽಲಂ । ೩ ।

ಕಾಷಾಯವಸ್ತ್ರವನ್ನು ಧರಿಸಿರುವವರೂ, ಉತ್ತಮವಾದ ತುಲಸೀ ಮತ್ತು ಪ್ರಕಾಶಮಾನವಾದ ಕಮಲಾಕ್ಷಾದಿಮಣಿಮಾಲೆಗಳನ್ನುಳ್ಳವರೂ, ಅಜ್ಞಾನ ಮತ್ತು ಪಾಪಜಾಲಗಳನ್ನು ಪರಿಹರಿಸುವವರೂ, ಹಿತವಚನಕಲಾಭಿಜ್ಞರೂ, ಸ್ವಭಾವತಃ ಪರಮ ಸುಂದರರೂ, ಆರ್ತರನ್ನು ರಕ್ಷಿಸುವುದರಲ್ಲೇ ಪರಮಾಸಕ್ತಿಯುಳ್ಳವರೂ, ಮುನಿ– ಸಮುದಾಯದಿಂದ ನಮಸ್ಕೃತರೂ, ವೈಷ್ಣವರಿಗೆ ಶ್ರೇಷ್ಠವಾದ ಸೌಕರ್ಯಕರರೂ,

ಮಂದಹಾಸದಿಂದ ಕೂಡಿದ ಮುಖ ಕಮಲವುಳ್ಳವರೂ, ಅನುಗ್ರಹಕರರೂ ಆದ, ಬ್ರಹ್ಮಣ್ಯತೀರ್ಥರನ್ನು ವಿಶೇಷ ಮರ್ಯಾದಾಪೂರ್ವಕ ಸಂಪೂರ್ಣ ಮನಸ್ಸಿನಿಂದ ಭಜಿಸುತ್ತೇನೆ.

ಯದ್ವೃಂದಾವನದರ್ಶನೇನ ನಿತರಾಂ ಪಾಪಾನಿ ಯಾಂತಿ ಕ್ಷಯಂ ।
ಯದ್ವೃಂದಾವನಮೃತ್ತಿಕಾ ಸುವಿಧೃತಾ ತಾಪತ್ರಯಧ್ವಂಸಿನೀ ॥
ಯದ್ವೃಂದಾವನ ಸೇವಯಾ ಭುವಿ ಜನಃಪ್ರಾಪ್ನೋತಿ ವಿದ್ಯಾಂ ಸುಖಂ ।
ಸರ್ವಾರಿಷ್ಟನಿವೃತ್ತಯೇಽಸ್ತು ಸ ಚ ಮೇ ಬ್ರಹ್ಮಣ್ಯತೀರ್ಥೋ ಗುರುಃ ।೪।

ಯಾರ ವೃಂದಾವನದರ್ಶನದಿಂದ ಪಾಪಗಳು ನಿಶ್ಶೇಷವಾಗಿ ನಾಶ ಹೊಂದುವುವೋ, ಯಾರ ವೃಂದಾವನದ ಮೃತ್ತಿಕೆಯು ಭಕ್ತಿಪೂರ್ವಕ ಧರಿಸಲ್ಪಟ್ಟರೆ ತಾಪತ್ರಯಗಳನ್ನು ಧ್ವಂಸಮಾಡುವುದೋ, ಯಾರ ಬೃಂದಾವನ ಸೇವೆಯಿಂದ ಭೂಮಿಯಲ್ಲಿ ಜನರು ವಿದ್ಯಾ ಸುಖಗಳನ್ನು ಹೊಂದುವರೋ, ಅಂತಹ ಬ್ರಹ್ಮಣ್ಯತೀರ್ಥಗುರುಗಳು ನನ್ನ ದುರದೃಷ್ಟಗಳನ್ನು ನಿವೃತ್ತಿಮಾಡಲಿ.

ಕುಷ್ಠಶ್ವೇತೋರುಗುಲ್ಮ ಕ್ಷಯಕಠಿಣತರವ್ಯಾಧಿವೈದ್ಯಾಧಿನಾಥೋ ।
ಭೂತಪ್ರೇತಗ್ರಹೋಚ್ಚಾಟನಕುಶಲಮಹಾಮಂತ್ರ ಮೂರ್ತಿರ್ಮುನೀಂದ್ರಃ ॥
ಸರ್ವಾಭೀಷ್ಟಪ್ರದಾತಾ ಸರಸಸುಹೃದಯಃಪುಣ್ಯಚಾರಿತ್ರನಾಮಾ ।
ಭೂಯಾದ್ಬ್ರಹ್ಮಣ್ಯತೀರ್ಥೋ ಗುರುಕುಲತಿಲಕೋ ಭೂಯಸೇ ಶ್ರೇಯಸೇ ಮೇ ।೫।

ಕುಷ್ಟ (ಮಹಾರೋಗ), ಶ್ವೇತ (ತೊನ್ನು), ಮಹಾಗುಲ್ಮ (ಹೊಟ್ಟೆ-ಯೊಳಗಿನ ಗಂಟುಬೇನೆ), ಕ್ಷಯ ಮೊದಲಾದ ಕಠಿಣತರ ವ್ಯಾಧಿಗಳನ್ನು ನಾಶಪಡಿಸುವ ವಿಷಯದಲ್ಲಿ ವೈದ್ಯಕುಲಗುರುಗಳಾದ, ಭೂತಪ್ರೇತಗ್ರಹಗಳನ್ನು ಓಡಿಸುವುದರಲ್ಲಿ ಸಮರ್ಥರಾದ, ಮಹಾಮಂತ್ರಗಳೇ ಮೂರ್ತಿವೆತ್ತಂತಿರುವ ಮುನೀಂದ್ರರೂ, ಸರ್ವಾ-ಭೀಷ್ಟಪ್ರದಾತೃಗಳೂ, ಕರುಣಾರಸಪೂರ್ಣ ಹೃದಯರೂ, ಪುಣ್ಯಕರವಾದ ನಡೆನುಡಿ-ಗಳಲ್ಲಿ ಹೆಸರಾಂತವರೂ, ಸ್ವಯಂ ಸಂಶಯರಹಿತರಾಗಿ ಮತ್ತೊಬ್ಬರ ಸಂಶಯಗಳನ್ನು ನಿವಾರಿಸುವ ಜ್ಞಾನಿಗಳಿಗೆ ಭೂಷಣರೂ, ಗುರುಕುಲತಿಲಕರೂ ಆದ ಶ್ರೀಬ್ರಹ್ಮಣ್ಯ-ತೀರ್ಥರು ನನ್ನ ಅಧಿಕವಾದ ಶ್ರೇಯಸ್ಸಿಗೆ ಕಾರಣವಾಗಲಿ.

ಶ್ರೀಮದ್ವ್ಯಾಸರಾಜಪೂಜ್ಯಚರಣರಿಂದ ವಿರಚಿತವಾದ
ಶ್ರೀಬ್ರಹ್ಮಣ್ಯತೀರ್ಥಗುರುರಾಜ ಪಂಚಮಾಲಿಕಾ ಸ್ತೋತ್ರವು ಸಂಪೂರ್ಣವು




ಬ್ರಹ್ಮಣ್ಯತೀರ್ಥರು –ಅಬ್ಬೂರು

ರಾ ಗ – ಕ ಲ್ಯಾ ಣಿ : ತಾ ಳ – ಛಾ ಪು ತಾ ಳ

ವೃಂದಾವನ ನೋಡಿರೊ ನೀವೆಲ್ಲಾ
ನಂದವನ್ನೆ ಪೊಂದಿರೊ ।ಪ।

ರಾಮಾಚಾರ್ಯರ ಪುತ್ರರೊ ಅವರು
ಮಾಮನೋಹರ ನೃಹರಿದೂತರೊ
ಜನ್ಮಅಷ್ಟಕೆ ಬ್ರಹ್ಮಚರ್ಯ ಪೊಂದಿ
ಬ್ರಹ್ಮವಿದ್ಯೆಯ ಪಡೆದರೊ
ಪ್ರೇಮದಿಂದಲಿ ಬಂದು ತಾವ್ ಪುರುಷೋ
ತ್ತಮತೀರ್ಥರ ಸಾರ್ದರೊ ।೧।

ಕಾಯಜಪಿತನ ತಾನ್ವಲಿಸೀ ದೇಶಂಗಳ
ಪ್ರೀಯದಿಂದಲಿ ಸಂಚರಿಸೀ
ಮಾಯಾರಮಣನು ಜೀವನೂ ಒಂದೆಂಬ
ಮಾಯಾವಾದಿಗಳ ತರಿದೂ
ವಾಯುಮತಪ್ರೀತಿಯಲಿ ಅರುಹುತ
ಪ್ರೀಯ ಅಬ್ಬೂರಲ್ಲಿ ನೆಲಸಿದ ।೨।

ವಿಟ್ಠಲನೃಹರಿ ಪೂಜೆಗೆ ನೇಮಿಸಿ ತಮ್ಮ
ಪಟ್ಟಶಿಷ್ಯರು ವ್ಯಾಸತೀರ್ಥರ
ಅಟ್ಟಹಾಸದಿ ಸರ್ವಜಿತೂ ಸಂ
ವತ್ಸರ ಕೃಷ್ಣೈಕಾದಶೀ ವೈಶಾಖ
ದಿಟ್ಟ ಗುರುಗೋವಿಂದವಿಟ್ಠಲನ
ದೃಷ್ಟಿಸೀ ತನು ಬಿಟ್ಟು ಪೊರಟನ ।೩।

**ಶ್ರೀ ಮ ದ್ ಜ ಯ ತೀ ರ್ಥ ಗು ರು ಭ್ಯೋ ನ ಮಃ**



www.vijayadasaru.net



ಚಿತ್ರೈಃ ಪದೈಶ್ಚ ಗಂಭೀರೈಃ ವಾಕ್ಯೈರ್ಮಾನೈರಖಂಡಿತೈಃ ।
ಗುರುಭಾವಂ ವ್ಯಂಜಯಂತೀ ಭಾತಿ ಶ್ರೀಜಯತೀರ್ಥವಾಕ್ ॥

ವ್ಯಾಕರಣಾದಿಸಂಸ್ಕಾರಯುಕ್ತವಾದ ಪದಗಳಿಂದಲೂ, ಆಳವಾದ ಅರ್ಥವುಳ್ಳ ವಾಕ್ಯಗಳಿಂದಲೂ ಪರವಾದಿಗಳಿಂದ ಖಂಡಿಸಲಶಕ್ಯವಾದ ಪ್ರತ್ಯಕ್ಷಾದಿ ಪ್ರಮಾಣಗಳಿಂದಲೂ (ಕೂಡಿದ) ಮತ್ತು ಗುರುಗಳಾದ ಶ್ರೀ ಮದಾಚಾರ್ಯರ ಹೃದಯವನ್ನು ಚೆನ್ನಾಗಿ ಪ್ರಕಟಮಾಡುವ ಶ್ರೀಜಯತೀರ್ಥಮಚ್ಚರಣರ ಮಾತು ಶೋಭಿಸುತ್ತದೆ.

ಯಸ್ಯ ವಾಕ್ಕಾಮಧೇನುರ್ನಃ ಕಾಮಿತಾರ್ಥಾನ್ ಪ್ರಯಚ್ಛತಿ ।
ಸೇವೇ ತಂ ಜಯಯೋಗೀಂದ್ರಂ ಕಾಮಬಾಣಚ್ಛಿದಂ ಸದಾ ॥

ಕಾಮಧೇನುವಿನಂತೆ ನಮಗೆ ಅಭೀಷ್ಟಗಳನ್ನು ಪೂರೈಸುವ ಸದ್ವಾಕ್ಯಜಾಲಗಳುಳ್ಳ ಕಾಮಬಾಣಗಳನ್ನು ಗೆದ್ದ ಶ್ರೀಮಜ್ಜಯತೀರ್ಥ ಗುರುಗಳನ್ನು ಸೇವಿಸುತ್ತೇನೆ.

(ಆ ರಾ ಧ ನೆ : ಆ ಷಾ ಢ ಮಾ ಸ ಕೃ ಷ್ಣ ಪ ಕ್ಷ ಪ ಂ ಚ ಮಿ)

ರಾ ಗ – ಶ ಂ ಕ ರಾ ಭ ರ ಣ : ತಾ ಳ – ಅ ಟ ತಾ ಳ

ಸಾರಿ ಭಜಿಸಿರೊ ಟೀಕಾರಾಯರಂಘ್ರಿಯ ।
ಘೋರಪಾತಕಾಂಬುಧಿಯ ಪಾರಮಾಳ್ಪರ । ಪ ।

ಮೋದತೀರ್ಥರ ಮತವ ಸಾಧಿಸುವರ ।
ಪಾದಸೇವ್ಯರ ದುರ್ಬೋಧ ಕಳೆವರ । ೧ ।

ಭಾಷ್ಯತತ್ವವ ವಿಸ್ತಾರ ಮಾಳ್ಪರ ।
ದೋಷದೂರರ ಆದಿಶೇಷಾವೇಶರ । ೨ ।

ಕಾಮಗೆದ್ದರ ಹರಿಗೆ ಪ್ರೇಮಪೂರ್ಣರ ।
ನೇಮನಿತ್ಯರ ನಿಷ್ಕಾಮನಾಪರ । ೩ ।

ಮೋಕ್ಷದಾತರ ಅಕ್ಷೋಭ್ಯತೀರ್ಥರ ।
ಸಾಕ್ಷಿಲಿಪ್ಪರ ಅಪೇಕ್ಷರಹಿತರ ।೪।

ವಿಜಯವಿಟ್ಠಲನ ಅಂಘ್ರಿ ಭಜನೆ ಮಾಳ್ಪರ
ಕುಜನಭಂಜರ ದಿಗ್ವಿಜಯರಾಯರ ।೫।

ರಾಗ – ಆನಂದಭೈರವಿ : ತಾಳ – ಮಿಶ್ರಛಾಪುತಾಳ

ಟೀಕಾಚಾರ್ಯರ ಪಾದಸೋಕಿದ ಕೊನೆಧೂಳಿ ।
ತಾಕಿದ ಮನುಜರಿಗೆ ।ಪ।

ಕಾಕುಗೊಳಿಸುವ ಅನೇಕ ಪಾಪಂಗಳ । ನೂಕಿ ಬಿಸಾಡಲು
ಸಾಕಾರ ಉಳ್ಳಂಥ ।ಅ ಪ।

ಮಧ್ವಮತವೆಂಬೊ ದುಗ್ದಾಬ್ಧಿಯೊಳು
ಉದ್ಭವಿಸಿದ ಚಂದ್ರನೊ
ಅದ್ವೈತಮತವನಭೇದನ ಕುಠಾರ
ವಿದ್ಯಾರಣ್ಯನ ಗರ್ವಕ್ಕೆ ಪರಿಹಾರ ।೧।

ತತ್ವವಾರಿಧಿಸಾರ ತತ್ವಸುಧಾಭಾಷ್ಯ
ವಿಸ್ತಾರವಾಗಿರಲು
ಚಿತ್ತವಿಟ್ಟು ಮಾಡಿ ಟೀಕಾವನ್ನು
ಸುತ್ತೇಳು ಜಗಕೆಲ್ಲ ಪ್ರಕಟಿಸಿ ಮೆರೆದಂಥ ।೨।

ಎಂದಿಗಾದರು ಒಮ್ಮೆ ಕೊನೆ ನಾಲಿಗೆಯಿಂದ
ಬಿಂದು ಮಾತ್ರದಿ ನೆನೆಯೆ
ಮಂದಮತಿಗಾದರು ಅಜ್ಞಾನ ನಾಶನ
ಸಂದೇಹವಿಲ್ಲವಯ್ಯ ಸ್ಮರಣೆ ಮಾಡಿದ ಮೇಲೆ ।೩।

ಜ ಎಂದು ನುಡಿಯಲು ಜಯಶೀಲನಾಗುವ
ಯ ಎಂದು ನುಡಿಯಲು ಯಮನಂಜುವ
ತೀ ಎಂದು ನುಡಿಯಲು ತಿಮಿರ ಪಾತಕ ಹಾನಿ
ರ್ಥ ಎಂದು ನುಡಿದರೆ ತಾಪತ್ರಯ ಪರಿಹಾರ ।೪।

ಯೋಗಿ ಅಕ್ಷೋಭ್ಯರ ಕರಕಮಲ ಸಂಜಾತ
ಭಾಗವತರ ಪ್ರಿಯನೆ
ಕಾಗಿಣಿ ತೀರದ ಮಳಖೇಡ ನಿವಾಸ
ಶ್ರೀಗುರು ವಿಜಯವಿಟ್ಠಲನ ಸೇವಕದಾಸ ।೫।

ರಾ ಗ – ಕ ಲ್ಯಾ ಣಿ ಬೇ ಹಾ ಗ್ : ತಾ ಳ – ಅ ಟ ತಾ ಳ


ಜಯರಾಯರ ನೋಡಿರೋ ಸಜ್ಜನರೆಲ್ಲ
ಜಯರಾಯರ ಪಾಡಿರೋ ।ಪ।

ಜಯರಾಯರ ನೋಡಿ ಜಪಿಸಿ ಮನದಿ ಪಾಡಿ
ಜಯವಾಗುವುದು ನಿಮಗೆ ಭಯನಾಶ ಸತತ ।ಅ ಪ।

ದುರಳಮತವೆಂಬೊ ಕರಿಗೆ ಅಂಕುಶವಿತ್ತು
ಸರಸಾದ ಗ್ರಂಥ ಆನಂದಮುನಿ
ವಿರಚಿಸಿ ಇರಲಾಗಿ ಪರಮಭಕ್ತಿಯಿಂದ
ವಿಸ್ತರ ಮಾಡಿದಾ ಕರದ ಕನ್ನಡಿಯಂತೆ ।೧।

ವಾದಿಗಳನೆಲ್ಲ ಜಯಿಸಿ ಡಂಗುರ ಹೊಯ್ಸಿ
ಭೇದಾರ್ಥಜ್ಞಾನ ಸತ್ಯವೆನಿಸಿ
ಈ ಧರೆಯೊಳು ಹರಿಯೇ ಪರದೈವವೆಂದು
ಸಾಧಿಸಿ ಮೆರೆದ ಉದ್ದಂಡನಾದ ಗುರುತಿಲಕ ।೨।

ಅಕ್ಷೋಭ್ಯತೀರ್ಥರ ಕರದಿಂದ ಜನಿಸಿ
ಮೋಕ್ಷಕೆ ಜಯಪತ್ರಿಕೆ ಕೊಡಿಸಿ
ಪಕ್ಷಿವಾಹನ ಸಿರಿವಿಜಯವಿಟ್ಠಲನ್ನ
ಈಕ್ಷಿಸುವುದಕುಪದೇಶ ಕೊಡುವ ಋಷಿ ।೩।



ರಾಗ – ಆನಂದಭೈರವಿ : ತಾಳ : ಆದಿತಾಳ

ಎದುರಾರೈ ಗುರುವೆ ಸಮರಾರೈ ।ಪ।

ಮದನ ಗೋಪಾಲನ ಪ್ರಿಯ ಜಯರಾಯ ।ಅ ಪ।

ಕಡುಗರ್ಜಿಸುವ ಕೇಸರಿಯಂತೆ ನಿಮ್ಮ ವಾದ
ಗಡಣೆಯ ಕೇಳುತ ನುಡಿ ಮುಂದೋಡದೆ
ಗಡಗಡ ನಡುಗುತ ಮಾಯ್ಗೋಮಾಯ್ಗಳು
ಅಡವಿಯೊಳಡಗೋರು ನಿಮ್ಮ ಭೀತಿಯಲಿ ।೧।

ಕುಟಿಲ ಮತಗಳೆಂಬೊ ಚಟುಲಂಧಕಾರಕ್ಕೆ
ಪಟುತರ ತತ್ವಪ್ರಕಾಶಿಕೆಯೆಂತೆಂಬ
ಚಟುಲತಾಪದಿಂದ ಖಂಡಿಸಿ ತೇಜೋ
ತ್ಕಟದಿ ಮೆರೆದ ಬುಧಕಟಕಾಬ್ಜ ಮಿತ್ರ ।೨।

ಅಮಿತ ದ್ವಿಜಾವಳಿ ಕುಮುದಗಳರಳಿಸಿ
ವಿಮತರ ಮುಖಕಮಲಂಗಳ ಬಾಡಿಸಿ
ಸ್ವಮತರ ಹೃತ್ಸಂತಾಪಗಳೋಡಿಸಿ
ವಿಮಲ ಸುಕೀರ್ತಿಯ ಪಡೆದೆಯೋ ಚಂದ್ರ ।೩।

ವೇದಶಾಸ್ತ್ರಗಳೆಂಬೊ ಶೃಂಗಗಳಿಂದ ಸು-
ಧಾದಿ ಗ್ರಂಥಗಳೆಂಬೊ ಸ್ತನದಿಂದೊಪ್ಪುತ ತತ್ವ-
ಬೋಧನೆಯೆಂಬ ದುಗ್ಧ ಶಿಷ್ಯವತ್ಸಂಗಳಿಗೆ
ಆದರದಲಿ ಕೊಟ್ಟ ಯತಿಸುರಧೇನು ।೪।

ವ್ಯಾಸಸೂತ್ರಗಳೆಂಬ ಮಂದರವನು ವೇದ
ರಾಶಿಯೆಂಬ ವಾರಾಶಿಯೊಳಿಟ್ಟು
ಶ್ರೀ ಸರ್ವಜ್ಞರ ವಾಕ್ಯಪಾಶದಿ ಸುತ್ತಿ
ಭಾಸುರ ನ್ಯಾಯಸುಧಾ ಪಡೆದ ಯತೀಂದ್ರ ।೫।

ವನಜನಾಭನ ಗುಣಮಣಿಗಳು ಸರ್ವಜ್ಞ-
ಮುನಿಕೃತ ಗ್ರಂಥಗಳವನಿಯೊಳಗಡೆ ಸ-
ಜ್ಜನರಿಗೆ ಟೀಕಾಂಜನದಿಂದ ತೋರಿಸಿ
ಘನ ಸುಖಸಾಧನ ಮಾಡಿದ್ಯೋ ಧೀರ ।೬।

ಅರ್ಥಿಮಂದಾರ ವೇದಾರ್ಥವಿಚಾರ ಸ-
ಮರ್ಥ ಶ್ರೀಕೃಷ್ಣ ಪಾದಾಂಬುಜಲೋಲ ಪ್ರ-
ತ್ಯರ್ಥಿ ಮತ್ತೇಭಕಂಠೀರವಕ್ಷೋಭ್ಯ-
ತೀರ್ಥ ಕರಜ ಜಯತೀರ್ಥ ಯತೀಂದ್ರ ।೭।

ಮಧ್ವರಿಗೆ ಸಮರಾದ ಗುರುಗಳಿಲ್ಲ

## ಶ್ರೀ ಮ ದ ಕ್ಷೋ ಭ್ಯ ತೀ ರ್ಥ ಗು ರು ಭ್ಯೋ ನ ಮಃ



ಶ್ರೀಮದಕ್ಷೋಭ್ಯತೀರ್ಥರು – ಮಳಖೇಡ

ಶ್ರೀ ಮದ್ರಮಾರಮಣ ಸದ್ಗಿರಿಪಾದಸಂಗೀ ವ್ಯಾಖ್ಯಾ
ನಿನಾದ ದಲಿತಾಖಿಲ ದುಷ್ಟದರ್ಪಂ
ದುರ್ವಾದಿವಾರಣ ವಿದಾರಣ ದಕ್ಷದೀಕ್ಷ–
ಮಕ್ಷೋಭ್ಯತೀರ್ಥ ಮೃಗರಾಜಮಹಂ ನಮಾಮಿ

ಪರಮಾತ್ಮನೆಂಬ ಶ್ರೇಷ್ಠ ಪರ್ವತದ ತಪ್ಪಲು ಪ್ರದೇಶಗಳಲ್ಲಿ ವಾಸಿಸುವ, ವ್ಯಾಖ್ಯಾನವೆಂಬ ಶಬ್ದದಿಂದ ಸೀಳಲ್ಪಟ್ಟ ಎಲ್ಲ ದುಷ್ಟರ ದರ್ಪವುಳ್ಳ ದುರ್ವಾದಿಗಳೆಂಬ ಆನೆಗಳನ್ನು ಸೀಳುವುದರಲ್ಲಿ ಕಟಿಬದ್ಧರಾದ, ಸಿಂಹದಂತಿರುವ, ಅಕ್ಷೋಭ್ಯತೀರ್ಥರನ್ನು ವಂದಿಸುವೆ.

ಯೋ ವಿದ್ಯಾರಣ್ಯ ವಿಪಿನಂ ತತ್ತ್ವಮಸ್ಯಸಿನಾಽಚ್ಛಿನತ್ ।
ಶ್ರೀಮದಕ್ಷೋಭ್ಯತೀರ್ಥಾಯ ನಮಸ್ತಸ್ಮೈ ಮಹಾತ್ಮನೇ ॥

ವಿದ್ಯಾರಣ್ಯರು ಎಂಬ ಅರಣ್ಯವನ್ನು ತತ್ವಮಸಿ ಎಂಬ ಖಡ್ಗದಿಂದ ಧ್ವಂಸಗೊಳಿಸಿದ ಮಹಾನುಭಾವರಾದ ಶ್ರೀ ಅಕ್ಷೋಭ್ಯತೀರ್ಥರನ್ನು ವಂದಿಸುವೆ.

( ಆ ರಾ ಧ ನೆ : ಮಾ ರ್ಗ ಶಿ ರ ಮಾ ಸ ಕೃ ಷ್ಣ ಪ ಕ್ಷ ಪ ಂ ಚ ಮಿ )

ರಾ ಗ – ಶಂ ಕ ರಾ ಭ ರ ಣ : ತಾ ಳ – ಅ ಟ ತಾ ಳ

ರಕ್ಷಿಸೆನ್ನನು ದಯಾಂಬುಧೇ ರಕ್ಷಿಸೆನ್ನನು ।ಪ।

ರಕ್ಷಿಸೆನ್ನ ಪಾಪ ಶಿಕ್ಷಿಸಿ ಕರುಣದಿ
ಪಕ್ಷಿವಾಹನಪ್ರಿಯ ಅಕ್ಷೋಭ್ಯಮುನಿಪ ।ಅ ಪ।

ಅನುಮಾನವಿಲ್ಲದೆ ಮಣಿದೆ ತವಾಂಘ್ರಿಗೆ
ಅನಘ ಶ್ರೀಮಾಧವಮುನಿಕರಜಾತ ।೧।

ಜಯಮುನಿವಂದಿತ ಜಯವಂತ ನೀನೆ
ದಯಮಾಡು ದುಃಖ ಬಯಲಾಗಲರಿಯೆ ।೨।

ಪ್ರಾಣೇಶವಿಟ್ಠಲನ ಧ್ಯಾನದೊಳಗೆ ಮನ
ತಾನಿರುವಂದದಿ ಪೋಣಿಸು ಜವದಿ ।೩।

**ಶ್ರೀ ಮಾ ಧ ವ ತೀ ರ್ಥ ಗು ರು ಭ್ಯೋ ನ ಮಃ**



ಶ್ರೀಮಾಧವತೀರ್ಥರು – ಮಣೂರು

ಮಾಧವಾಂಘ್ರಿ ಯುಗಾಸಕ್ತಾ ಮಾಧವಾಖ್ಯ ಮುನೀಶ್ವರಾಃ ।
ಅಭ್ರಮರ್ಮಧ್ವತೀರ್ಥಂ ಯೇ ದುದುಸ್ತೇಽಭೀಷ್ಟ ಸಂತತಿಂ ॥

ಆ ಮಾಧವನ ಪಾದಯುಗಲಗಳಲ್ಲಿ ಆಸಕ್ತರಾದ ಮಧ್ವಶಾಸ್ತ್ರವೆಂಬ ತೀರ್ಥದಲ್ಲಿಯೇ ಸಂಚರಿಸುವ ಮಾಧವ ಮುನಿಗಳು ನಮ್ಮ ಅಭೀಷ್ಟಗಳನ್ನು ನೆರವೇರಿಸಲಿ.

ಸಾಧಿತಾಖಿಲಸತ್ತತ್ವಂ ಬಾಧಿತಾಖಿಲದುರ್ಮತಂ ।
ಬೋಧಿತಾಖಿಲ ಸನ್ಮಾರ್ಗಂ ಮಾಧವಾಖ್ಯಯತಿಂ ಭಜೇ ॥

ಎಲ್ಲ ಸತ್‌ತತ್ವಗಳನ್ನು ಸಾಧಿಸಿದ, ಎಲ್ಲ ದುರ್ಮತಗಳನ್ನು ಖಂಡಿಸಿದ, ಎಲ್ಲ ಸನ್ಮಾರ್ಗವನ್ನು ಉಪದೇಶಿಸಿದ, ಮಾಧವತೀರ್ಥರನ್ನು ಸೇವಿಸುತ್ತೇನೆ.

( ಆ ರಾ ಧ ನೆ : ಭಾ ದ್ರ ಪ ದ ಮಾ ಸ ಕೃ ಷ್ಣ ಪ ಕ್ಷ ಅ ಮಾ ವಾ ಸ್ಯೆ )

ರಾ ಗ – ಸೌ ರಾ ಷ್ಟ್ರ : ತಾ ಳ – ಏ ಕ ತಾ ಳ

ನೋಡಿದೆ ನಾ ಧನ್ಯನಿಂದಿಗೆ
ನೋಡಿದೆ ಗುರುಮಾಧವತೀರ್ಥರ ವೃಂದಾವನವನ್ನು ।ಪ।

ಗಂಗೆಗೇನು ಪ್ರಯೋಜನವಿಳೆಯೊಳಗೆ ಬಾಹದಕೆ
ಪಿಂಗಳಗೇನು ಜ್ಞಾನಿಗಳಿಗೇನು
ತುಂಗಮಹಿಮೆಯಿಂದ ಅಜ್ಞ ಜನರ ಪಾಪ
ಹಿಂಗಿಸಬೇಕೆಂಬುದಲ್ಲದೆ ಮನವೆ ।೧।

ನರಹರಿಗುರುಸುತ ವರದ ಅಕ್ಷೋಭ್ಯಮುನಿ
ಕರಪೂಜಿತ ಅರವಿಂದನಾಭರಲ್ಲಿ
ಧರಾಧರಜತೀರದಿ ಸತ್ಯಮುನಿಗಳಿಂದ
ನಿರುತಾರಾಧನೆಕೊಳುತಿರ್ಪರು, ಮನವೆ ।೨।

ಏನ ಇವರ, ಬಣ್ಣಿಸಲು ಎನ್ನಿಂದೊಶವಲ್ಲ
ಆನತ ಜನರಿಗೆ ಕರುಣಿಸಿ
ಪ್ರಾಣೇಶವಿಟ್ಠಲನ ಧಾಮ ತೋರಿಸುವರು
ಕ್ಷೋಣಿಯೊಳಗಪ್ರತಿಮ ಮಹಿಮರು ।೩।

**ಶ್ರೀ ನ ರ ಹ ರಿ ತೀ ರ್ಥ ಗು ರು ಭ್ಯೋ ನ ಮಃ**



ಶ್ರೀನರಹರಿತೀರ್ಥರು – ಹಂಪೆ

ಭೂದೇವೀ ರಮಣಾಸಕ್ತೋ ರಘ್ವೀಶ ಪದಮಾನಸಃ
ನೃಹರ್ಯಾಖ್ಯ ಗುರುರ್ಭೂಯಾದಸ್ಮದಿಷ್ಟಾರ್ಥ ಸಿದ್ಧಯೇ ॥

ಭೂದೇವಿಗೆ ಪತಿಯಾದ ಭಗವಂತನಲ್ಲಿ ಭಕ್ತಿಯುಳ್ಳ, ರಘುಕುಲತಿಲಕ ಶ್ರೀರಾಮಚಂದ್ರನ ಪಾದವನ್ನು ಸದಾ ಧ್ಯಾನಿಸುವ, ನರಹರಿತೀರ್ಥರು ನಮ್ಮ ಅಭೀಷ್ಟಗಳನ್ನು ಕರುಣಿಸಲಿ.

ಸಸೀತಾ ಮೂಲರಾಮಾರ್ಚಾ ಕೋಶೇ ಗಜಪತೇಃ ಸ್ಥಿತಾ ।
ಯೇನಾನೀತಾ ನಮಸ್ತಸ್ಮೈ ಶ್ರೀಮನ್ನೃಹರಿ ಭಿಕ್ಷುವೇ ॥

ಗಜಪತಿ ರಾಜನ ಕೋಶದಲ್ಲಿದ್ದ ಸೀತಾಸಹಿತ ಮೂಲರಾಮನ ಪ್ರತಿಮೆಯನ್ನು ತಂದ ಶ್ರೀ ನರಹರಿತೀರ್ಥರನ್ನು ನಮಸ್ಕರಿಸುವೆ.

( ಆ ರಾ ಧ ನೆ : ಪು ಷ್ಯ ಮಾ ಸ ಕೃ ಷ್ಣ ಪ ಕ್ಷ ಸ ಪ್ತ ಮಿ )

ರಾ ಗ – ಮು ಖಾ ರಿ : ತಾ ಳ – ಝಂ ಪೆ ತಾ ಳ

ನರಹರಿ ತೀರ್ಥರ ಮಹಿಮೆ ಕೇಳಿರೊ
ನರದೇಹವನ್ನು ಸಾರ್ಥಕ ಮಾಡಿರೊ ।ಪ।

ಕಾರ್ಯಸ್ಥ ಬ್ರಹ್ಮ ಮಾಡಿಸಿ ಪೂಜಿಸಿ ಕೊಡಲು
ಆರ್ಯ ಜಾಬಾಲ ಮುನಿಗೆ ಪ್ರಸನ್ನನಾಗಿ
ಭಾರ್ಯಸಹಿತ ಶರ್ಮ ಪೂಜಿಸಿ ಸೌಭರಿಗೆ ಕೊಡಲು
ಸೂರ್ಯ ವಂಶಕೆ ರಾಮ ಸೀತೆ ಬರಲು ।೧।

ಜಾಂಬವಂತನು ಪೂಜಿಸಿ ವೇದಗರ್ಭಗೆ ಕೊಡಲು
ಕುಂಭೇಶ್ವರನ ಕೋಶದಲ್ಲಿ ಇರಲು
ಅಂಬುಜೋದ್ಭವನಲ್ಲಿ ನಿತ್ಯ ಪೂಜಿಸುತಿರಲು
ಜಂಭಾರಿ ಪುರವನ್ನೈದಿದನು ಆಜನಿಪ ।೨।

ಗುರು ಆನಂದತೀರ್ಥರಿಂದ ಚತುರಾಶ್ರಮ ಸ್ವೀಕರಿಸಿ
ವರ ಗಗನ ನದೀ ತೀರದಿ ಗುಹ್ಯದೊಳಿರಲು
ಕರಿ ಬಂದು ಕೂಗುತಿರೆ ಕೇಳಿ ಹೊರಗೆ ಬರಲು
ಭರದಿ ಪಟ್ಟಭಿಷಿಕ್ತನಾಗಿ ರಾಷ್ಟ್ರದೊಳೊಪ್ಪಿದ ।೩।

ಆ ದೇಶ ಪದವಿ ಹನ್ನೆರಡು ವರುಷ ಮೂರು ಮಾಸ
ಮೋದದಿಂದನುಭವಿಸಿ ರಾಜಪದವ
ಸಾದರದಿ ಪಿಂಗಾಶ್ವಿಜ ಶುದ್ಧ ಸಪ್ತಮಿ
ಆ ಧರಿಯ ರಾಜಪುತ್ರಗೆಯಿತ್ತ ಮಹಿಮ ।೪।

ರಾಜಪುತ್ರ ಪತ್ನಿ ನಿಮಗೆ ಬೇಕಾದ ವಸ್ತು ವೈವುದೆನಲು
ಆ ಜನಪನ ಕೋಶದಲ್ಲಿ ಮಂದಾಸನದೊಳು
ರಾಜಿಸುತಿಪ್ಪ ಸೀತಾರಾಮ ಮೂರ್ತಿಗಳನು ತೆಗೆದುಕೊಂಡು
ವಾಜಿಯನೇರಿ ಕೂರ್ಮಕ್ಕೆ ಬಂದು ಪದ್ಮನಾಭರಿಗಿತ್ತನು । ೫ ।

ಪದುಮನಾಭಯತಿ ತಾನು ದಶಮತಿಗೆ ಅರ್ಪಿಸಲು
ಮುದದಿ ಮೂರು ಮಾಸದಿ ಹದಿಮೂರು ದಿನವು
ಮದನನಯ್ಯನ ಪೂಜಿಸಿ ಕೊಡಲು ತಾಂ ಪೂಜಿ
ಸಿದ ಆರು ವರುಷ ಇನ್ನೂರು ತೊಂಭತ್ತು ದಿನ । ೬ ।

ಗುರು ಪದ್ಮನಾಭರಾಜ್ಞದಲ್ಲಿಂದ ಒಂಭತ್ತು
ವರುಷ ಮೇಲ್ಯೆವತ್ತು ಮೂರುದಿನವು
ಧರಿಣಿ ಜಯ ಮೂಲ ರಾಮನಂಘ್ರಿಯ ಭಜಿಸಿ
ಪುರಂದರವಿಟ್ಠಲನ ಪ್ರೀತಿ ಪಡೆದ । ೭ ।

**ಶ್ರೀ ಪ ದ್ಮ ನಾ ಭ ತೀ ರ್ಥ ಗು ರು ಭ್ಯೋ ನ ಮಃ**


ಶ್ರೀಪದ್ಮನಾಭತೀರ್ಥರು – ನವವೃಂದಾವನ

ಶ್ರೀಮಧ್ವ ಸಂಸೇವನಲಬ್ಧ ಶುದ್ಧ ।
ವಿದ್ಯಾ ಸುಧಾಂಭೋನಿಧಯೋಽಮಲಾ ಯೇ ॥
ಕೃಪಾಲವಃ ಪಂಕಜನಾಭತೀರ್ಥಾಃ ।
ಕೃಪಾಲವಃಸ್ಯಾನ್ಮಯಿ ನಿತ್ಯಮೇಷಾಮ್ ॥

ಪೂರ್ಣಪ್ರಜ್ಞರ ಉತ್ತಮ ಸೇವೆಯಿಂದ ಹೊಂದಿದ ಪರಿಶುದ್ಧವಾದ ವಿದ್ಯಾರೂಪ ಅಮೃತದ ಸಮುದ್ರದಂತಿರುವ, ನಿರ್ಮಲವಾದ ಮನಸ್ಸುಳ್ಳ, ಕೃಪಾಳುಗಳಾದ ಪದ್ಮನಾಭತೀರ್ಥರ ಕೃಪಾಲೇಶವಾದರೂ ನನ್ನ ಮೇಲೆ ಸದಾ ಇರಲಿ.

ಪೂರ್ಣಪ್ರಜ್ಞಕೃತಂ ಭಾಷ್ಯಮಾದೌ ತದ್ಭಾವ ಪೂರ್ವಕಮ್ ।
ಯೋ ವ್ಯಾಕರೋನ್ನಮಸ್ತಸ್ಮೈ ಪದ್ಮನಾಭಾಖ್ಯ ಯೋಗಿನೇ ।

ಪೂರ್ಣಪ್ರಜ್ಞರು ರಚಿಸಿದ ಭಾಷ್ಯವನ್ನು ಅವರ ಅಭಿಪ್ರಾಯವನ್ನರಿತು ಪ್ರಪ್ರಥಮವಾಗಿ ವ್ಯಾಖ್ಯಾನಿಸಿದ ಯೋಗಿಗಳಾದ ಪದ್ಮನಾಭತೀರ್ಥರನ್ನು ವಂದಿಸುವೆ.

( ಆ ರಾ ಧ ನೆ : ಕಾ ರ್ತೀ ಕ ಮಾ ಸ ಕೃ ಷ್ಣ ಪ ಕ್ಷ ಚ ತು ರ್ದ ಶಿ )

ರಾ ಗ – ಕ ಮಾ ಚ್ : ತಾ ಳ – ಆ ದಿ ತಾ ಳ

ಪದ್ಮನಾಭರ ಭಜಿಸೊ ಹೇ ಮನುಜ ನೀ ।ಪ।

ಮಧ್ವರಾಯರ ಕರಪದ್ಮಸಂಭವರಾದ ।ಅ ಪ।

ಮತ್ತಮಾಯಿಗಳೆಂಬೊ ಹಸ್ತಿಗಣಕೆ ಪಂಚ
ವಕ್ತ್ರರೆಂದೆನಿಸಿದ ಪೃಥ್ವೀಸುರಸೇವಿತ ।೧।

ಪ್ರೀತಿಯಿಂದಲಿ ಗೋಪೀನಾಥನರ್ಚಿಸಿ ಸುಖ
ತೀರ್ಥಗ್ರಂಥಕೆ ಸುವ್ಯಾಖ್ಯಾಕರ್ತರೆಂದೆನಿಸಿದ ।೨।

ಧರೆಯೊಳು ಶರಣರ ಪೊರೆವ ಕಾರ್ಪರನರ
ಹರಿಯನೊಲಿಸಿದಂಥ ಪರಮ ಮಹಿಮರಾದ । ೩ ।

**ಶ್ರೀ ಮ ದಾ ನ ಂ ದ ತೀ ರ್ಥ ಗು ರು ಭ್ಯೋ ನ ಮಃ**



ಸತ್ಸಂಗಮಾನಸಸರೋವರ ಮಧ್ಯವರ್ತೀ
ಕೃಷ್ಣಾಂಘ್ರಿಚಾರುಕಮಲಾರ್ಪಿತಚಿತ್ತವೃತ್ತಿಃ ।
ಶಾಸ್ತ್ರಾತಿಮಂಜುಪದರಂಜಿತರಮ್ಯಸಂಸ–
ದಾಸ್ಮಾಕಹೃತ್ಸರಸಿಜೇಽಸ್ತು ಸ ಮಧ್ವಹಂಸಃ ॥

ಸಜ್ಜನ ಸಮುದಾಯದ ಮಾನಸ ಸರೋವರದ ಮಧ್ಯದಲ್ಲಿ ವಾಸಿಸುವ, ಯಾವಾಗಲೂ ಶ್ರೀಕೃಷ್ಣನ ಸುಂದರ ಪಾದಗಳೆಂಬ ಕಮಲಗಳಲ್ಲಿಯೇ ಆಸಕ್ತ ಚಿತ್ತ–ವೃತ್ತಿಯುಳ್ಳ, ತನ್ನ ಶಾಸ್ತ್ರೀಯವಾದ ಅತಿ ಮನೋಹಾರಕ ಪದಗಳಿಂದ ಸಜ್ಜನ ಸಭೆಯನ್ನು ರಂಜನಗೊಳಿಸುವ, ಶ್ರೀಮದಾನಂದತೀರ್ಥರೆಂಬ ಪರಮಹಂಸ ಪಕ್ಷಿಯು ನನ್ನ ಮನಸ್ಸೆಂಬ ಸರೋವರದಲ್ಲಿ ಬಂದು ನೆಲೆಸಲಿ.

(ಶ್ರೀ ರು ಕ್ಮಿ ಣೀ ಶ ವಿ ಜ ಯಃ – ಶ್ರೀ ವಾ ದಿ ರಾ ಜ ರು)



ಪಂಚಭೇದಾತ್ಮಕ ಪ್ರಪಂಚಕೆ
ಪಂಚರೂಪಾತ್ಮಕನೆ ದೈವಕ
ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ ।
ಪಂಚವಿಂಶತಿ ತತ್ವ ತರತಮ
ಪಂಚಿಕೆಗಳನು ಪೇಳ್ದ ಭಾವಿವಿ–
ರಿಂಚಿಯೆನಿಪಾನಂದತೀರ್ಥರ ನೆನೆವೆನನುದಿನವು ॥

ಪಂಚಭೇದ ಸ್ವರೂಪವಾದ ಈ ಪ್ರಪಂಚಕ್ಕೆ ಪಂಚರೂಪಿಯಾದ ಶ್ರೀಹರಿಯೆ ಪರದೇವತೆ. ರುದ್ರ, ಇಂದ್ರ ಮುಂತಾದವರೆಲ್ಲ ಅವನಿಗೆ ಕಿಂಕರರು. ಇಪ್ಪತ್ತೈದು ತತ್ವಗಳಿವೆ. ತಾರತಮ್ಯವಿದೆ.' ಈ ಎಲ್ಲ ವಿವರಗಳನ್ನು ಉಪದೇಶಿಸಿದ ಭಾವಿ ಬ್ರಹ್ಮರೆನಿಸಿದ ಆನಂದತೀರ್ಥರನ್ನು ಅನುದಿನವೂ ನೆನೆಯುವೆನು.

( ಹ ರಿ ಕ ಥಾ ಮೃ ತ ಸಾ ರ – ಮ ಂ ಗ ಳಾ ಚ ರ ಣ ಸ ಂ ಧಿ )

ನಮಸ್ತೇ ಪ್ರಾಣೇಶ ಪ್ರಣತ ವಿಭವಾಯ ಅವನಿಮಗಾಃ
ನಮಃ ಸ್ವಾಮಿನ್ ರಾಮಪ್ರಿಯತಮ ಹನೂಮನ್ ಗುರುಗುಣ ।
ನಮಸ್ತುಭ್ಯಂ ಭೀಮ ಪ್ರಬಲತಮ ಕೃಷ್ಣೇಷ್ಟ ಭಗವನ್
ನಮಃ ಶ್ರೀಮನ್ಮಧ್ವ ಪ್ರದಿಶ ಸುದೃಶಂ ನೋ ಜಯ ಜಯ ॥

ಎಲ್ಲ ಇಂದ್ರಿಯಾಭಿಮಾನಿ ದೇವತೆಗಳನ್ನು ನಿಯಮಿಸುವ ಮುಖ್ಯಪ್ರಾಣದೇವರೇ, ಸಜ್ಜನರ ಮೇಲಿನ ಕೃಪೆಯಿಂದ ಧರಣಿಗೆ ಇಳಿದು ಬಂದಿರಿ. ನನ್ನ ಪ್ರಣಾಮಗಳು. ಶ್ರೀರಾಮಚಂದ್ರನಿಗೆ ಅತ್ಯಂತ ಪ್ರೀತಿಪಾತ್ರರಾದ ಶ್ರೇಷ್ಠವಾದ ಗುಣಗಳನ್ನು ಹೊಂದಿರುವ ಹನೂಮಂತ ದೇವರೇ, ನನ್ನ ನಮಸ್ಕಾರಗಳು. ಬಲಿಷ್ಠರೂ ಶ್ರೀಕೃಷ್ಣನಿಗೆ ಮುಖ್ಯಪ್ರೀತಿಪಾತ್ರರೂ ಆದ ಭೀಮಸೇನದೇವರೇ ನಿಮಗೆ ನಮಸ್ಕಾರವು. ಭಗವಾನ್ ಶ್ರೀಮನ್ಮಧ್ವರೇ ನಿಮಗೆ ನಮಸ್ಕಾರವು. ನಮಗೆ ಉತ್ತಮ ಜ್ಞಾನವನ್ನು ಕರುಣಿಸಿರಿ. ತಮಗೆ ಜಯವಾಗಲಿ, ಜಯವಾಗಲಿ.

ಅಭ್ರಮಂ ಭಂಗ ರಹಿತಂ ಅಜಡಂ ವಿಮಲಂ ಸದಾ ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಂ ।

ಶ್ರೀಮದಾಚಾರ್ಯರ ಶಾಸ್ತ್ರವು ಖಚಿತವಾದ ಸ್ಪಷ್ಟ ಅಭಿಪ್ರಾಯ–ಯುಕ್ತವು. ಅನುಮಾನಕ್ಕೆ ಆಸ್ಪದವಿಲ್ಲದ್ದು. ಅಸ್ಖಲಿತವಾದದ್ದು. ಜಾಡ್ಯಾದಿ ದೋಷ–ರಹಿತವಾದದು. ಅಂಥಾ ಶಾಸ್ತ್ರನಿರ್ಮಾತೃಗಳೂ, ಆಧ್ಯಾತ್ಮಿಕ, ಆದಿದೈವಿಕ, ಆದಿಭೌತಿಕ ತಾಪಗಳನ್ನು ನಿವಾರಿಸುವ ಸಾಮರ್ಥ್ಯವುಳ್ಳವರೂ ಆದ ಆನಂದತೀರ್ಥ ಮುನಿಗಳನ್ನು ಭಕ್ತಿಪೂರ್ವಕವಾಗಿ ವಂದಿಸುತ್ತೇವೆ.

ಬ್ರಹ್ಮಾಂತಾ ಗುರವಃ ಸಾಕ್ಷಾದಿಷ್ಟಂ ದೈವಂ ಶ್ರಿಯಃಪತಿಃ ।
ಆಚಾರ್ಯಾಃ ಶ್ರೀಮದಾಚಾರ್ಯಾಃ ಸಂತು ಮೇ ಜನ್ಮಜನ್ಮನಿ ॥

ನನಗೆ ಜನ್ಮಜನ್ಮದಲ್ಲಿಯೂ ಬ್ರಹ್ಮದೇವರ ವರೆಗಿನ ಸ್ವೋತ್ತಮ ಜೀವರೆಲ್ಲರೂ ಗುರುಗಳಾಗಿ ಲಭಿಸಲಿ. ಇಷ್ಟದೈವ ಸಾಕ್ಷಾತ್ ಲಕ್ಷ್ಮೀರಮಣನೆ ಆಗಿರಲಿ. ಆಚಾರ್ಯರು ಶ್ರೀ ಮದಾಚಾರ್ಯರೇ ಆಗಿರಲಿ.

( ಮ ಧ್ವ ಜ ಯ ಂ ತೀ : ಆ ಶ್ವ ಯು ಜ ಶು ಕ್ಲ ಪ ಕ್ಷ ದ ಶ ಮಿ )
( ಬ ದ ರಿ ಕಾ ಶ್ರ ಮ ಪ್ರ ಯಾ ಣ : ಮಾ ಘ ಶು ದ್ಧ ನ ವ ಮೀ )

## ಮಧ್ವ ಮತವೇ ಮತವು ಸಕಲ ಶ್ರುತಿ ಸಮ್ಮತವು

ರಾ ಗ – ನಾ ಟಿ : ತಾ ಳ – ಮಿ ಶ್ರ ಛಾ ಪು ತಾ ಳ

ಏನ ಬಂಣ್ಣಿಪೆನಮ್ಮ । ಪ ।

ಬಂಣಿಪೆ ನಮ್ಮಯ್ಯ ಗುರುರಾಯರ । ಅ ಪ ।

ಮಧ್ವಸರೋವರ ತೀರದ ಮುದ್ದುಕೃಷ್ಣನ ಪ್ರ-
ಸಿದ್ಧಿಯಿಂದ ಪೂಜೆಮಾಡಿ ಗೆದ್ದ ಬಲವಂತ ರಾಯರ । ೧ ।

ಭವಬಂಧ ಮಾಯಿಗಳ ಕಾಲಲೊದ್ದು ಮೂಲಿಲ್ವಾಕಿ
ಮಧ್ವಶಾಸ್ತ್ರವೆಲ್ಲ ಪ್ರಸಿದ್ಧ ಮಾಡಿದ ಯತಿರಾಯರ । ೨ ।

ಸಿರಿ ಹಯವದನನ ಚರಣಕಮಲವನ್ನು
ನಿರುತವಾಗಿ ಸೇವಿಸುವ ಅಚ್ಛಿನ್ನ ನಿಜದಾಸರ । ೩ ।



ಶ್ರೀಮದಾನಂದತೀರ್ಥರು – ಪಾಜಕ

ರಾ ಗ – ಸೌ ರಾ ಷ್ಟ್ರ : ತಾ ಳ – ಆ ದಿ ತಾ ಳ

ಆನಂದ ತೀರ್ಥರೆಂಬೊ ಅರ್ಥಿಯ ಪೆಸರುಳ್ಳ ।
ಗುರು ಮಧ್ವಮುನಿರಾಯ ।ಪ।

ಏನೆಂಬೆ ನಾನಿಮ್ಮ ಕರುಣಕ್ಕೆ ಎಣೆಗಾಣೆ
ಗುರು ಮಧ್ವಮುನಿರಾಯ । ಅ ಪ ।

ಬೇಸರದೆ ಸರ್ವರೊಳು ಶ್ವಾಸಜಪಂಗಳ ಮಾಡಿ
ಗುರು ಮಧ್ವಮುನಿರಾಯ
ಶ್ರೀಶಗರ್ಪಿಸುತ ನಿನ್ನ ದಾಸರನು ಸಲಹಿದಿ
ಗುರು ಮಧ್ವಮುನಿರಾಯ ।೧।

ಅಂದು ಹನುಮಂತನಾಗಿ ಬಂದು ಸುಗ್ರೀವಗೆ
ಗುರು ಮಧ್ವಮುನಿರಾಯ
ಅಂದವಾದ ಪದವಿತ್ತಾನಂದದಿಂದ ಪೊರೆದೆಯೊ
ಗುರು ಮಧ್ವಮುನಿರಾಯ ।೨।

ಕುಂತಿಯ ಕುಮಾರನಾಗಿ ಹೊಂತ ಕೌರವರ ಕೊಂದೆ
ಗುರು ಮಧ್ವಮುನಿರಾಯ
ಅನಂತ ಪುಣ್ಯವ ಗಳಿಸಿ ಶ್ರೀಕಾಂತನಿಗರ್ಪಿಸಿದೆ
ಗುರು ಮಧ್ವಮುನಿರಾಯ ।೩।

ಅದ್ವೈತರನು ಕಾದು ಗೆದ್ದು ನಿನ್ನ ಭಕ್ತರಿಗೆ
ಗುರು ಮಧ್ವಮುನಿರಾಯ
ಶುದ್ಧ ತಾತ್ಪರ್ಯ ವಾಕ್ಯ ಪದ್ಧತಿಯ ತಿಳಿಸಿದೆ
ಗುರು ಮಧ್ವಮುನಿರಾಯ ।೪।

ಗುರುಪ್ರಾಣೇಶವಿಟ್ಠಲ ಪರನೆಂದು ಡಂಗುರವ
ಗುರು ಮಧ್ವಮುನಿರಾಯ
ಸಾರಿ ಸಜ್ಜನರಿಗೆ ಹರಿಯ ಲೋಕ ತೋರಿಸಿದಿ
ಗುರು ಮಧ್ವಮುನಿರಾಯ ।೫।




ರಾಗ – ಕಮಾಚ್ : ತಾಳ – ಆದಿತಾಳ

ಗುರು ಮಧ್ವಮುನಿರನ್ನ ಮೂರು ಪರಿಯದೋರಿದೆ ನಿನ್ನ
ಹರಿಭಕ್ತಿಯಲಿ ಅವಿಚ್ಛಿನ್ನ ಸರಿಯಾರು ಧರೆಯೊಳು ನಿನ್ನ
ಸ್ಮರಣೆಯಲಿಹೆ ರಾಮನ್ನ ಪರಮಪಾವನ್ನ ।೧।

ಅತಿಬಾಹು ಪರಾಕ್ರಮ ಕ್ಷಿತಿಯೊಳು ನಿನ್ನದೇ ನೇಮ
ಪ್ರಥಮಲ್ಯಾದೆ ಹನುಮ ದ್ವಿತಿಯಲ್ಯಾದೆ ಭೀಮ
ತೃತಿಯಲ್ಲಿ ಪೂರ್ಣ ಪ್ರಾಜ್ಞನೆನಿಸಿದೆ ನಿಸ್ಸೀಮ । ೨ ।

ಸಾಹ್ಯಕ್ಕೆ ಕಾರಣ ಮಹಾದ್ಯೆತ್ಯರ ಮರ್ದನ
ಶ್ರೀಹರಿ ಸಾನ್ನಿಧ್ಯ ಪೂರ್ಣ ಇಹ ಸಕಲನಿಪುಣ
ಮಹಿಪತಿ ಮುಖ್ಯಪ್ರಾಣ ಸ್ವಹಿತ ಸಾಧನ । ೩ ।



ಶ್ರೀ ಮಧ್ವರು – ಪಾಜಕಕ್ಷೇತ್ರ

ರಾಗ – ಪಂತುವರಾಳಿ : ತಾಳ – ತಿಶ್ರ ಛಾಪು

ನೆರೆನಂಬಿ ಪಡೆಯಿರೊ ಹಿತವ ನಮ್ಮ
ಗುರುವಾದ ಮಧ್ವಮುನಿ ಸಮ್ಮತವ । ಪ ।

ತ್ರೇತೆಯೊಳಂಜನಾ ತನಯನಾಗಿ
ಸೀತಾರಮಣ ರಘುನಾಥಗೆ ಪ್ರಿಯ
ದೂತತನದಿ ಖಳತತಿಯ ಕೊಂದು
ಖ್ಯಾತಿ ಪಡೆದ ಹನುಮನಾದ ಯತಿಯ । ೧ ।

ದ್ವಾಪರದಲಿ ಭೀಮನೆನಿಸಿ ಪಾಂಡು
ಭೂಪನರಸಿ ಕುಂತಿದೇವಿಯೊಳುದಿಸಿ
ಶ್ರೀಪತಿಗರ್ಥಿಯ ಸಲಿಸಿ ನೃಪಾ–
ನೃಪರೆಲ್ಲರ ಕೊಂದ ಮಹಿಮನ್ನ ಭಜಿಸಿ ।೨।

ಕಲಿಯುಗದಲಿ ಯತಿಯಾಗಿ ಈ
ಇಳೆಯ ದುಶ್ಶಾಸ್ತ್ರವ ಜರಿದ ವಿರಾಗಿ
ಕುಲಗುರು ಶ್ರೀ ಮಧ್ವಯೋಗಿ ನಮ್ಮ
ಚಲುವ ಹಯವದನನ ಭಂಟನೆಂದು ಬಾಗಿ ।೩।


ಶ್ರೀ ಮಧ್ವರು – ಉಡುಪಿ

ರಾಗ – ಶಂಕರಾಭರಣ : ತಾಳ – ಏಕತಾಳ

ಮಧ್ವರಾಯಾ ಗುರು ಮಧ್ವರಾಯಾ
ಮಧ್ವರಾಯಾ ಗುರು ಮಧ್ವರಾಯಾ ।ಪ।

ರಾಮಾವತಾರದೊಳೊಮ್ಮೆ ಮಧ್ವರಾಯಾ
ಆ ಮಹಾ ಹನುಮನಾದೆ ಮಧ್ವರಾಯಾ
ವಾಮಮುಷ್ಟಿಲಿ ರಾವಣನ ಗೆಲಿದೆ ಮಧ್ವರಾಯಾ
ಕಾಮಿತಾರ್ಥ ಸುರರಿಗಿತ್ತೆ ಮಧ್ವರಾಯಾ ।೧।

ಕೃಷ್ಣಾವತಾರದಳೊಮ್ಮೆ ಮಧ್ವರಾಯಾ
ದುಷ್ಟಕುಲಕೆ ಭೀಮನಾದೆ ಮಧ್ವರಾಯಾ
ಕುಟ್ಟಿದೆ ಕೌರವರನೆಲ್ಲ ಮಧ್ವರಾಯಾ ಶ್ರೀ
ಕೃಷ್ಣನ ಪ್ರೀತಿಯ ಪಡೆದೆಯೊ ಮಧ್ವರಾಯಾ ।೨।

ಧರೆಯೊಳು ಯತಿಯಾಗಿ ಜನಿಸಿದೆ ಮಧ್ವರಾಯ
ಗುರುವ್ಯಾಸರ ಹಿತವ ಪಡೆದೆ ಮಧ್ವರಾಯಾ
ದುರುಳ ಮಾಯಿ ಮತವ ಮುರಿದೆ ಮಧ್ವರಾಯಾ
ಪುರಂದರವಿಟ್ಠಲನ ದಾಸನಾದೆ ಮಧ್ವರಾಯಾ ।೩।

ರಾ ಗ – ಕಾಂ ಬೋ ಧಿ : ತಾ ಳ – ಝಂ ಪೆ ತಾ ಳ

ಮಧ್ವರಾಯರ ಕರುಣ ಪಡೆಯದವ ಧರೆಯೊಳಗೆ
ಇದ್ದರೇನು ಇಲ್ಲದಿದ್ದರೇನು ।ಪ।

ಮಧ್ವಮತವೇ ಮತವು ಸಕಲಶ್ರುತಿಸಮ್ಮತವು
ಮಧ್ವರಾಯರ ಧ್ಯಾನ ಅಮೃತಪಾನ
ಮಧ್ವರಾಯರ ಲೀಲೆ ನವರತುನದಮಾಲೆ
ಮಧ್ವರಾಯರ ಸ್ಮರಣೆ ಕುಲಕೋಟಿ ಉದ್ಧರಣೆ ।೧।

ಮಧ್ವರಾಯರ ಕಥಾ ಕೇಳಲು ದುರಿತಹತ
ಮಧ್ವರಾಯರ ಭಕುತಿ ಮಾಡೆ ಮುಕುತಿ
ಮಧ್ವರಾಯರ ಸ್ತೋತ್ರ ಮಾಡಿದವ ಸತ್ಪಾತ್ರ
ಮಧ್ವರಾಯರ ಭಜನೆ ದುಷ್ಕರ್ಮತ್ಯಜನೆ ।೨।

ಮಧ್ವರಾಯರ ದಾಸನಾದವನೆ ನಿರ್ದೋಷ
ಮಧ್ವರಾಯರಭಂಟ ಜಗಕೆ ನೆಂಟ
ಮಧ್ವರಮಣ ವಿಜಯವಿಟ್ಠಲನ ಕಿಂಕರರಾದ
ಮಧ್ವರ ಕಾರುಣ್ಯ ಪಡೆದವನೆ ಧನ್ಯ ।೩।



ರಾ ಗ – ನಾ ಟಿ : ತಾ ಳ – ಝಂ ಪೆ ತಾ ಳ


ನಮೊನಮೋ ಹರಿಪ್ರೀಯ ನಮೊನಮೋ ಸುರಗೇಯ
ನಮೊನಮೋ ಗುರುರಾಯ ಮಧ್ವಮುನಿ ಜೀಯಾ ।ಪ।

ಧರೆಗೆ ಭಾರವಾಗಿ ಚರಿಸುತಿರೆ ಮಾಯಿಗಳು
ಧರಿಸಲಾರದೆ ಧರಣಿ ಸರಸಿಜೋದ್ಭವಗೆ
ಮೊರೆಯಿಡಲು ಅಜನಾಗ ಹರಸುರರ ಸಹವಾಗಿ
ಹರಿಯ ಸದನವ ಸಾರಿ ಅರುಹಿದನು ಇದನೆಲ್ಲ ।೧।

ಕಾವನಯ್ಯನು ವಸುಧೆ ಭಾವವನು ತಿಳಿದನಿಲ
ದೇವನೇ ನಿನಗೆ ಆಜ್ಞೆಯನೀಯಲು
ದೇವ ನೀನವತರಿಸಿ ಪಾವನವ ಮಾಡಿ ಸ
ಜ್ಜೀವಿಗಳಪೊರೆದೆ ದುರ್ಜೀವಿಗಳ ನೀ ಮುರಿದೆ ।೨।

ಕಾಮವನು ಕಡಿದು ಸನ್ನೇಮವನು ಹಿಡಿದು ಬಹು
ಸೀಮೆಯೊಳು ವಾದಿಗಳ ಸ್ತೋಮ ತರಿದು
ಹೇಮ ಕಚ್ಚುಟ ವೇಣುಗೋಪಾಲವಿಟ್ಠಲನ
ನಾಮ ಸುಧೆ ಸುಜನರಿಗೆ ಪ್ರೇಮದಲಿ ಸವಿಯಿತ್ತೆ ।೩।

ಮಧ್ವರಿಗೆ ಸಮರಾದ ಗುರುಗಳಿಲ್ಲ



ರಾಗ – ಸೌರಾಷ್ಟ್ರ : ತಾಳ – ಅಟತಾಳ

ನೆನೆವೆನು ಅನುದಿನ ನಿಮ್ಮ ಮಹಿಮೆಯನು ಮಧ್ವರಾಯಾ
ಸನಕಾದಿ ಮುನಿವೃಂದ ಸೇವಿತ ಪಾದಾಬ್ಜ ಮಧ್ವರಾಯಾ ।ಪ।

ಕಲಿಮಲದಿಂ ಜ್ಞಾನ ಕಲುಷಿತವಾಗಲು ಮಧ್ವರಾಯಾ
ನಳಿನಾಕ್ಷನಾಜ್ಞೆಯಿಂದಿಳೆಯೊಳಗುದಿಸಿದೆ ಮಧ್ವರಾಯಾ ।೧।

ಗೋವಿತ್ತ ವಿಪ್ರಗೆ ನಿರುತ ಮೋಕ್ಷವನಿತ್ತೆ ಮಧ್ವರಾಯಾ
ಜೀವೇಶರೊಂದೆಂಬ ಮತವ ಭೇದಿಸಿದೆ ಮಧ್ವರಾಯಾ ।೨।

ಸೂತ್ರಾರ್ಥಂಗಳನೆಲ್ಲ ವೇತ್ತೃಗಳಿಗೆ ತಿಳಿಸಿ ಮಧ್ವರಾಯಾ
ಶಾಸ್ತ್ರದ ತಾತ್ಪರ್ಯ ಪ್ರಕರಣ ರಚಿಸಿದೆ ಮಧ್ವರಾಯಾ ।೩।

ಸುಜನರ ಹೃದಯದಿ ಸೇರಿದ್ದ ತಮಸಿಗೆ ಮಧ್ವರಾಯಾ
ನಿಜಜ್ಞಾನ ರವಿಯಂತೆ ಕಿರಣವ ಹರಡಿದೆ ಮಧ್ವರಾಯಾ ।೪।

ವ್ಯಾಸದೇವರಿಗಭಿವಂದಿಸಿ ಬದರಿಯಲಿ ಮಧ್ವರಾಯಾ
ಶ್ರೀಶಪುರಂದರವಿಟ್ಠಲನದಾಸನಾದೆ ಮಧ್ವರಾಯಾ ।೫।



ರಾಗ – ಮೋಹನ : ತಾಳ – ಆದಿ ತಾಳ

ಪೂರ್ಣಬೋಧ ಮುನಿರಾಯ ಎನ್ನಲಿ ಕ
ರುಣವ ಮಾಡಯ್ಯ ।ಪ।

ಚರಣವ ನಂಬಿದ ತರುಣನ ಭವ
ಅರಣವ ದಾಟಿಸಿ ಶರಣನ ಪೊರೆಯೋ ।ಅ ಪ।

ನಿನ್ನಮತದಿ ದೀಕ್ಷಾ ಪೊಂದಿಸಿ
ನಿನ್ನ ಕರುಣ ಕಟಾಕ್ಷ
ನಿನ್ನ ಶಾಸ್ತ್ರದಲನನ್ಯ ಭಾವವ
ಮನ್ನಿಸೊ ದಿನದಿನ ಎನ್ನೊಳು ನೆಲೆಸಿದ್ದು ।೧।

ಪಂಚಭೇದಮತಿಯಾ ತರತಮ
ಪಂಚಕ ಭಾವದ ಪರಿಯಾ
ವಂಚನೆ ಮಾಡದೆ ಪಂಚಿಕಿ ತಿಳಿಸೆಲೊ
ಮಂಚಿಗೆ ಮರುತ ವಿರಿಂಚಿಯಾಗುವಿ ನೀ ।೨।

ಮಾತರಿಶ್ವ ಹನುಮಾ ಭೀಮಾ
ಯತಿನಾಥ ಮಧ್ವನಾಮಾ
ಖ್ಯಾತಮಾಯಿಮತ ವ್ರಾತವನಳಿದ
ದಾತ ಗುರುಜಗನ್ನಾಥವಿಟ್ಠಲ ಪ್ರಿಯ ।೩।

**ಶ್ರೀ ವೇ ದ ವ್ಯಾ ಸ ಗು ರು ಭ್ಯೋ ನ ಮಃ**



ವ್ಯಾಸಾಯಾಪ್ರತಿಮೇತಿಹಾಸರಚನೋಲ್ಲಾಸಾಯ ದುರ್ವಾದಿನಾಂ ।
ತ್ರಾಸಾಯಾಸಕರಾಯ ಸತ್ಸುಕೃತವಿಶ್ವಾಸಾಯ ದೋಷದ್ವಿಷೇ ।
ಭಾಸಾಯಾಮುನರಮ್ಯತೋಯಸದ್ಯಶಾಯಾಸಾಯ ಮಾಸೇವಿನೇ
ದಾಸಾಯಾಭಯದಾಯ ಮಧ್ವಗುರುಹೃದ್ವಾಸಾಯ ತುಭ್ಯಂ ನಮಃ ॥

ಅಪ್ರತಿಮ ಇತಿಹಾಸ ರಚನೆಯಿಂದಾನಂದಿಸುವ, ದುರ್ವಾದಿಗಳಿಗೆ ತ್ರಾಸಾಯಾಸಕರನಾದ, ಸಜ್ಜನರಲ್ಲಿಡಲ್ಪಟ್ಟ ವಿಶ್ವಾಸವುಳ್ಳ, ದೋಷದೂರನಾದ

ಯಮುನಾತೋಯ ಸದೃಶ ನೀಲವರ್ಣ ವಿಶಿಷ್ಟನಾದ, ಶ್ರೀದೇವಿಸೇವಿತನಾದ ಮಧ್ವ– ಗುರು ಹೃದಯನಿವಾಸಿ ದಾಸರಿಗಭಯದಾಯಿ ವ್ಯಾಸರಾದ ನಿಮಗೆ ನಮಸ್ಕಾರಗಳು.

(ಶ್ರೀಮನ್ಮಹಾಭಾರತ ಲಕ್ಷಾಲಂಕಾರಃ – ಶ್ರೀ ವಾದಿರಾಜರು)

ವೇದಪೀಠ ವಿರಿಂಚಿಭವ ಶ–
ಕ್ರಾದಿ ಸುರ ವಿಜ್ಞಾನದಾಯಕ
ಮೋದ ಚಿನ್ಮಯ ಗಾತ್ರ ಲೋಕ ಪವಿತ್ರ ಸುಚರಿತ್ರ
ಛೇದ ಭೇದ ವಿಷಾದ ಕುಟಿಲಾಂ–
ತಾದಿ ಮಧ್ಯವಿದೂರ ಆದಾ–
ನಾದಿ ಕಾರಣ ಬಾದರಾಯಣ ಪಾಹಿ ಸುತ್ರಾಣ

ಹೇ ವೇದವ್ಯಾಸರೆ, ನೀವು ವೇದಗಳಿಗೆ ಆಶ್ರಯರು. ಬ್ರಹ್ಮ–ರುದ್ರೇಂದ್ರಾದಿ ದೇವತೆಗಳಿಗೆ ಉತ್ತಮ ಜ್ಞಾನದಾಯಕರು. ಆನಂದ ಜ್ಞಾನಮಯ ಶರೀರ ಉಳ್ಳವರು. ಲೋಕದಲ್ಲೆಲ್ಲ ಅತ್ಯಂತ ಪವಿತ್ರರು. ಮಂಗಳಚರಿತರು. ಶರೀರದಲ್ಲಿ ಛೇದ ಭೇದಗಳಾಗಲಿ, ಮನಸ್ಸಿನಲ್ಲಿ ವಿಷಾದ ಕಪಟ ಬುದ್ಧಿಗಳಾಗಲಿ, ಶರೀರ ಮನಸ್ಸುಗಳೆರಡಕ್ಕೂ ಆದಿ ಅಂತ್ಯ ಮಧ್ಯ ಎಂಬ ಭಾಗಗಳಾಗಲಿ ಇಲ್ಲದವರು. ವೇದ ವಿಭಾಗ ಬ್ರಹ್ಮಸೂತ್ರರಚನಾದಿ ಮಹಾಕಾರ್ಯ ಮಾಡಿದವರು. ಪ್ರಸಿದ್ಧವಾದ ಬಾದರಾಯಣ ಎಂಬ ನಾಮ ಉಳ್ಳವರು. ಸಜ್ಜನ ರಕ್ಷಕರು. ನೀವು ನಮ್ಮನ್ನು ಕಾಪಾಡಿ.

( ಶ್ರೀ ಹ ರಿ ಕ ಥಾ ಮೃ ತ ಸಾ ರ – ಮ ಂ ಗ ಳಾ ಚ ರ ಣ ಸ ಂ ಧಿ )



ರಾಗ – ಕಾನಡ : ತಾಳ – ಆದಿತಾಳ

ಏನೊ ಈ ವೇಷ ವೇದವ್ಯಾಸ
ಏನೊ ಈ ವೇಷ ।ಪ।

ಭಾನುಕೋಟಿ ಪ್ರಕಾಶ ಬದರೀ ನಿವಾಸ ।ಅ ಪ।

ಮುತ್ತು ಮಾಣಿಕ್ಯ ನವರತ್ನ ಮುಕುಟವಿರೆ
ನೆತ್ತಿಲಿ ಕೆಂಜೆಡೆ ಪೊತ್ತುಕೊಂಡಿಪ್ಪುದು ।೧।

ದ್ರೌಪದಿ ಕರೆಯಲಪಾರವಸ್ತ್ರವನಿತ್ತೆ
ಕೌಪೀನ ಧರಿಸಿದ ಕೌತುಕವೇನಯ್ಯ ।೨।

ವರವೈಕುಂಠವ ಬಿಟ್ಟು ವೋಹನವಿಟ್ಠಲ
ಧರೆಯೊಳು ಬೋರೆಯ ಮರದಡಿಯಲಿರುವುದು ।೩।

# ದೇ ವ ತಾ ತಾ ರ ತ ಮ್ಯ ಸ ಂ ಗ್ರ ಹ



ರಾ ಗ – ಸೌ ರಾ ಷ್ಟ್ರ : ತಾ ಳ – ಝ ಂ ಪೆ ತಾ ಳ

ಸತ್ಯ ಜಗತಿದು ಪಂಚ ಭೇದವು ನಿತ್ಯ ಶ್ರೀಗೋವಿಂದನ
ಕೃತ್ಯವರಿತು ತಾರತಮ್ಯದಿ ಕೃಷ್ಣನಧಿಕವೆಂದು ಸಾರಿರೈ । ಪ ।

ಜೀವ ಈಶಗೆ ಭೇದ, ಸರ್ವತ್ರ ಜೀವ ಜೀವಕೆ ಭೇದವು
ಜೀವ ಜಡಕೆ, ಜಡಜಡಕೆ ಭೇದ, ಜಡ ಪರಮಾತ್ಮಗೆ । ೧ ।

ಮಾನುಷೋತ್ತಮರಿಗಧಿಕ ಕ್ಷಿತಿಪರು ಮನುಜದೇವಗಂಧರ್ವರು
ಜಾನಪಿತೃಜಾನಕರ್ಮಜದಾನವಾರಿತತ್ವಾತ್ಮರು । ೨ ।

ಗಣಪಮಿತ್ರರು ಸಪ್ತಋಷಿಗಳು ವಹ್ನಿನಾರದವರುಣರು
ಇನಜಗೆ ಸಮ ಚಂದ್ರಸೂರ್ಯರು ಮನುಸುತೆಯು ಹೆಚ್ಚು ಪ್ರವಹನು ॥ ೩ ॥

ದಕ್ಷಸಮ ಅನಿರುದ್ಧಗುರು ಶಚಿರತಿ ಸ್ವಾಯುಂಭುವರಾರ್ವರು
ಕಕ್ಷ ಪ್ರಾಣನಿಗಿಂತ ಕಾಮನು ಕಿಂಚಿದಧಿಕನು ಇಂದ್ರನು ॥ ೪ ॥

ದೇವ ಇಂದ್ರಂಗಧಿಕ ಮಹರುದ್ರ ರುದ್ರಸಮಶೇಷ ಗರುಡರು
ಕೇವಲಧಿಕರು ಗರುಡಶೇಷರಿಗೆ ದೇವಿಭಾರತಿಸರಸ್ವತಿ ॥ ೫ ॥

ವಾಯುವಿಗೆ ಸಮರಿಲ್ಲ ಜಗದೊಳು ವಾಯುದೇವರೆ ಬ್ರಹ್ಮರು
ವಾಯುಬ್ರಹ್ಮಗೆ ಕೋಟಿಗುಣಗಳಿಂದಧಿಕಶಕ್ತಳು ಶ್ರೀರಮಾ ॥ ೬ ॥

ಅನಂತಗುಣಗಳಿಂದ ಲಕುಮಿಗೆ ಅಧಿಕನು ಶ್ರೀಪುರಂದರವಿಟ್ಠಲನು
ಘನಸಮರು ಇವಗಿಲ್ಲ ಜಗದೊಳು ಹನುಮಹೃತ್ಪದ್ಮವಾಸಿಗೆ ॥ ೭ ॥

## ದೇ ವ ತಾ ತಾ ರ ತ ಮ್ಯ

## ಶ್ರೀ ವಿ ನಾ ಯ ಕ



ಹೇರಂಬ ಕುಂಭಲಸಿತಾಮಲಕುಂಕುಮಾಂಕ
ಮಾರಾರಿಪುತ್ರ ಕರಿವಕ್ತ್ರ ಪವಿತ್ರಗಾತ್ರ ।
ಕಾರುಣ್ಯರೂಪ ಸುಕಲಾಪ ಮಹಾಪ್ರತಾಪ
ಪ್ರಾರಬ್ಧಕಾರ್ಯ ಮುರುಧೈರ್ಯ । ಭವೇದವಿಘ್ನಮ್ ॥

ಕುಂಭಸ್ಥಳದಲ್ಲಿ (ಆನೆಯ ಹಣೆಯ ಪ್ರದೇಶದಲ್ಲಿ) ಪ್ರಕಾಶಿಸುವ ನಿರ್ಮಲವಾದ ಕುಂಕುಮದ ಅಲಂಕಾರತಿಲಕವುಳ್ಳ, ಮದನಾರಿಯ ಪುತ್ರನಾದ, ಆನೆಯ ಮುಖವುಳ್ಳ, ಪವಿತ್ರವಾದ ದೇಹವುಳ್ಳ, ಮೂರ್ತಿವೆತ್ತ ದಯೆಯಂತಿರುವ, ಉತ್ತಮವಾದ ಆಭರಣವುಳ್ಳ, ಮಹಾಪ್ರತಾಪಶಾಲಿಯಾದ, ಮಹಾಧೈರ್ಯ-ಶಾಲಿಯಾದ ಎಲೈ ಹೇರಂಬನೇ (ಗಣೇಶನೇ) । ನಿನ್ನ ಅನುಗ್ರಹದಿಂದ ಕೈಗೊಂಡ ಕಾರ್ಯವು ನಿರ್ವಿಘ್ನವಾಗಿ ನೆರವೇರಲಿ.

( ಶ್ರೀ ಸ ರ ಸ ಭಾ ರ ತೀ ವಿ ಲಾ ಸಃ – ಶ್ರೀ ವಾ ದಿ ರಾ ಜ ರು )

ವಿಘ್ನರಾಜನೆ ದುರ್ವಿಷಯದೊಳು
ಮಗ್ನವಾಗಿಹ ಮನವ ಮಹದೋ-
ಷಘ್ನನಂಘ್ರಿಸರೋಜಯುಗಳದಿ ಭಕ್ತಿಪೂರ್ವಕದಿ
ಲಗ್ನವಾಗಿಸು ನಿತ್ಯನರಕಭ-
ಯಾಗ್ನಿಗಳಿಗಾನಂಜೆ ಗುರುವರ
ಭಗ್ನಗೈಸೆನ್ನವಗುಣಗಳನು ಪ್ರತಿದಿವಸದಲ್ಲಿ

ವಿಘ್ನಗಳನ್ನು ನಾಶಮಾಡುವುದರಲ್ಲಿ ರಾಜನಾದಂಥ ವಿಘ್ನರಾಜನೆ । ಮನಸ್ಸು ದುರ್ವಿಷಯಗಳ (ಅವಗುಣಗಳು ಎಂದರೆ ಪರಮಾತ್ಮ ಪ್ರೀತಿಕರವಲ್ಲದ ದಾರಾಪುತ್ರಾದಿಗಳೇ ತಾರಕರೆಂದು ತಿಳಿದು ಭಗವದ್ ಭಕ್ತರಲ್ಲಿ ಆದರರಹಿತರಾಗಿ ಅವರ ಸನ್ಮಾನಾದಿಗಳನ್ನು ಮಾಡದೆ ಧಿಕ್ಕರಿಸಿ ನಡೆಯುವುದು) ಕಡೆ ಹೋಗದಂತೆಯೂ, ಸದಾ ಪರಮಾತ್ಮನ ಪಾದಾರವಿಂದಗಳನ್ನು ಚಿಂತಿಸುತ್ತಿರುವಂತೆಯೂ ಮಾಡು. ನರಕ-ಅಗ್ನಿ ಮೊದಲಾದವುಗಳಿಗೆ ಹೆದರುವುದಿಲ್ಲ. ಆದರೆ ಮನಸ್ಸು ಎಲ್ಲಿ ದುರ್ವಿಷಯದಲ್ಲಿ (ಹರಿ ಸ್ಮರಣವಿಹೀನರಾಗಿ ಮಾಡಿದರೆ ದುರ್ವಿಷಯ) ತೊಡಗುತ್ತದೋ ಎಂಬ ಹೆದರಿಕೆ ಮಾತ್ರ ಇದೆ.

(ಹರಿಕಥಾಮೃತಸಾರ – ಗಣಪತಿ ಸ್ತೋತ್ರ ಸಂಧಿ)

ರಾ ಗ – ನಾ ಟಿ : ತಾ ಳ – ತ್ರಿ ವಿ ಡೆ ತಾ ಳ

ಶರಣು ಸಿದ್ಧಿವಿನಾಯಕ ಶರಣು ವಿದ್ಯಾಪ್ರದಾಯಕ ।ಪ।

ಶರಣು ಪಾರ್ವತಿತನಯ ಮೂರುತಿ ಶರಣು ಮೂಷಕವಾಹನ ।ಅ ಪ।

ನಿಟಿಲ ನೇತ್ರನ ದೇವಿ ಸುತನೆ ನಾಗಭೂಷಣ ಪ್ರಿಯನೆ
ಕಟಿಕಟಾಂಗದ ಕೋಮಲಾಂಗನೆ ಕರ್ಣಕುಂಡಲಧಾರನೆ ।೧।

ಬಟುವ ಮುತ್ತಿನ ಹಾರ ಪದಕನೆ ಬಾಹು ಹಸ್ತಚತುಷ್ಟನೆ
ಇಟ್ಟ ತೊಡಿಗೆಯು ಹೇಮ ಕಂಕಣ ಪಾಶಾಂಕುಶಧಾರನೆ ।೨।

ಕುಕ್ಷಿ ಮಹಾಲಂಬೋದರನೆ ಇಕ್ಷುಚಾಪನ ಗೆಲಿದನೆ
ಪಕ್ಷಿವಾಹನ ಸಿರಿಪುರಂದರವಿಟ್ಠಲನ ನಿಜದಾಸನೆ ।೩।

ರಾ ಗ – ಪೀ ಲು : ತಾ ಳ – ಆ ದಿ ತಾ ಳ

ಗಜವದನ ಬೇಡುವೆ ಗೌರೀತನಯ ।ಪ।

ತ್ರಿಜಗ ವಂದಿತನೆ ಸುಜನರ ಪೊರೆವನೆ ।ಅ ಪ।

ಪಾಶಾಂಕುಶಧರ ಪರಮ ಪವಿತ್ರ
ಮೂಷಕವಾಹನ ಮುನಿಜನ ಪ್ರೇಮ ।೧।

ಮೋದದಿ ನಿನ್ನಯ ಪಾದವ ತೋರೊ
ಸಾಧು ವಂದಿತನೆ ಆದರದಿಂದಲಿ ।೨।

ಸರಸಿಜನಾಭ ಶ್ರೀ ಪುರಂದರವಿಟ್ಠಲನ
ನಿರುತ ನೆನೆಯುವಂತೆ ದಯಮಾಡೊ ।೩।



ರಾಗ – ದರ್ಬಾರ್ : ತಾಳ – ಅಟತಾಳ

ನಮ್ಮಮ್ಮ ಶಾರದೇ ಉಮಾ ಮಹೇಶ್ವರಿ
ನಿಮ್ಮೊಳಗಿಹನಾರಮ್ಮ । ಪ ।

ಕಮ್ಮಗೋಲನವೈರಿ ಸುತನಾದ ಸೊಂಡಿಲ
ಹೆಮ್ಮೈಯ ಗಣನಾಥನೆ ಅಮ್ಮಯ್ಯ । ಅ ಪ ।

ಮೋರೆಕಪ್ಪಿನ ಭಾವ ಮೊರದಗಲ ಕಿವಿ
ಕೋರೆದಾಡೆಯನಿವನ್ಯಾರಮ್ಮ
ಮೂರು ಕಣ್ಣನಸುತ ಮುರಿದಿಟ್ಟ ಚಂದ್ರನ
ಧೀರ ತಾ ಗಣನಾಥನೇ ಅಮ್ಮಯ್ಯ । ೧ ।

ಉಟ್ಟದಟ್ಟಿಯು ಬಿಗಿದುಟ್ಟ ಚಲ್ಲಣದ
ದಿಟ್ಟ ತಾನಿವನ್ಯಾರಮ್ಮ
ಪಟ್ಟದ ರಾಣಿ ಪಾರ್ವತಿಯ ಕುಮಾರ
ಹೊಟ್ಟೆಯ ಗಣನಾಥನೆ ಅಮ್ಮಯ್ಯ ।೨।

ರಾಶಿವಿದ್ಯೆಯ ಬಲ್ಲ ರಮಣಿ ಹಂಬಲನೊಲ್ಲ
ಭಾಷಿಗನಿವನ್ಯಾರಮ್ಮ
ಲೇಸಾಗಿ ಸುಜನರ ಸಲಹುವ ನೆಲೆಯಾದಿ-
ಕೇಶವನ ದಾಸ ಕಣೇ ಅಮ್ಮಯ್ಯ ।೩।



ರಾಗ - ನಾಟಿ : ತಾಳ - ಆದಿತಾಳ

ಗಜಮುಖ ವಂದಿಸುವೆ ಕರುಣಿಸಿ ಕಾಯೊ ।ಪ।

ಗಜಮುಖ ವಂದಿಪೆ ಗಜಗೌರಿಯ ಪುತ್ರ
ಅಜನ ಪಿತನ ಮೊಮ್ಮಗನ ಮೋಹದ ಬಾಲ ।ಅ ಪ।

ನೀಲಕಂಠನ ಸುತ ಬಾಲ ಗಣೇಶನೆ
ಬಾರಿ ಬಾರಿಗೆ ನಿನ್ನ ಭಜನೆ ಮಾಡುವೆನಯ್ಯ ।೧।

ಪರುವತನ ಪುತ್ರಿ ಪಾರ್ವತಿಯ ಕುಮಾರ
ಗರುವಿಯಾ ಚಂದ್ರಗೆ ಸ್ಥಿರಶಾಪ ಕೊಟ್ಟನೆ ।೨।

ಹರಿಹರರು ನಿನ್ನ ಚರಣ ಪೂಜೆಯ ಮಾಡಿ
ದುರುಳ ಕಂಟಕರನು ತರಿದು ಬಿಸುಡಿದರಯ್ಯ ।೩।

ಮತಿಗೆಟ್ಟ ರಾವಣ ಪೂಜಿಸದೆ ಸೀತಾ–
ಪತಿ ಕರದಿಂದಲಿ ಹತವಾಗಿ ಪೋದ ।೪।

ವಾರಿಜನಾಭ ಶ್ರೀ ಹಯವದನನ ಪದ
ಸೇರುವ ಮಾರ್ಗದ ದಾರಿಯ ತೋರೊ ।೫।



ರಾಗ – ಮೋಹನ : ತಾಳ – ಆದಿತಾಳ

ಗಣಪತಿ ಎನ್ನ ಪಾಲಿಸೊ । ಗಂಭೀರ ।ಪ।

ಪಾರ್ವತಿನಂದನ ಸುಂದರವದನ
ಶರ್ವಾದಿಸುರಪ್ರಿಯ ಶಿರಬಾಗುವೆನು ।೧।

ಆದಿಪೂಜಿತ ನೀನು ಮೋದ ಭಕ್ತರಿಗಿತ್ತು
ಮಾಧವನಲಿ ಮನ ಸದಾ ನಿಲಿಸು ನೀ ।೨।

ಪಂಕಜನಯನ ಶ್ರೀವೆಂಕಟವಿಟ್ಠಲನ
ಕಿಂಕರನೆನಿಸೆನ್ನ ಶಂಕರತನಯನೆ ।೩।

ರಾ ಗ – ಕ ಮಾ ಚ್ : ತಾ ಳ – ಆ ದಿ ತಾ ಳ

ಗಜವದನ ಪಾವನ ವಿಘ್ನನಾಶನ ।ಪ।

ವರಪಾಶಾಂಕುಶಧರ ಪರಮದಯಾಳೊ
ಕರುಣಾಪೂರಿತ ಗೌರಿವರಕುಮಾರನೆ ।೧।

ಸುಂದರವದನ ಅರವಿಂದನಯನ ಘನ–
ಸುಂದರಿ ಕಂದನೆ ಬಂದು ರಕ್ಷಿಸೊ ।೨।

ಗೋಪಾಲವಿಟ್ಠಲನ ಅಪಾರ ಭಜಕನೆ
ಶಾಪಾನುಗ್ರಹಶಕ್ತ ಅನೇಕ ಮಹಿಮ ।೩।



ರಾ ಗ – ನಾ ಟಿ : ತಾ ಳ – ಝಂ ಪೆ ತಾ ಳ

ಗಜಮುಖನೆ ಸಿದ್ಧಿದಾಯಕನೆ ವಂದಿಪೆ ಶರಣು ।ಪ।

ತ್ರಿಜಗವಂದಿತನಾದ ದೇವದೇವನೆ ಶರಣು
ಸುಜನರಿಗೆ ವಿಘ್ನವನು ಪರಿಹರಿಪೆ ಶರಣು ।ಅ ಪ।

ಮಂದಮತಿಯನು ಬಿಡಿಸಿ ಚಂದ ಜ್ಞಾನವನಿತ್ತು
ಇಂದಿರೇಶನ ಪಾದ ಪೊಂದಿಪ್ಪ ತೆರದಿ
ಸುಂದರಾಂಗನೆ ನಿನ್ನ ಪದದ್ವಂದ್ವಕೆರುಗುವೆನೊ
ಸಂದೇಹ ಮಾಡದಲೆ ಇಂದು ಕರುಣಿಪುದು ।೧।

ಹರನ ತನಯನೆ ಕರುಣಾಕರನೆ ಸುರನರವರದ
ಮೊರೆಯ ಲಾಲಿಸಿ ಎನ್ನ ಕರಗಳನೆ ಪಿಡಿದು
ಪೊರೆಯದಿದ್ದರೆ ಬಿಡೆನು ನೆರೆದೆ ನಿನ್ನಡಿಗಳನು
ತ್ವರಿಯದಿಂದಲಿ ನೋಡು ಶರಣೆಂಬೆ ನಿನಗೆ ।೨।

ಸಿದ್ಧಿದಾಯಕ ನಿನ್ನ ಪೊದ್ದಿ ಮೆರೆವೆನೊ ನಾನು
ಅಬ್ಧಿಶಯನನ ಮಹಿಮೆ ಬದ್ಧದಲಿ ಪೇಳ್ವ
ಶುದ್ಧಮತಿಯನು ಕೊಟ್ಟು ಉದ್ಧರಿಸಬೇಕೆನ್ನ
ಮಧ್ವವಲ್ಲಭ ವೇಣುಕೃಷ್ಣಗತಿಪ್ರಿಯ ।೩।



ರಾಗ – ಪೂರ್ವಿ : ತಾಳ – ಝಂಪೆ ತಾಳ

ನಂಬಿದೆನೊ ನಿನ್ನ ಪಾದ ಲಂಬೋದರ ।
ಅಂಬರಾಧಿಪ ಮನದ್ವಂಬಲವ ನೀಡೆಂದು ।ಪ।

ನಾಕನಾಥನುತ ಪಿನಾಕಿಸುತ ।
ಕಾಕು ಮತಿಯ ಕಳೆದು ಕಾಯೋ
ಆಖುವಾಹನ ಏಕದಂತ ।೧।

ಭದ್ರ ಮೂರುತಿಯೇ ಕರುಣಾಬ್ಧಿ ತ್ವರಿತ ।
ಉದ್ಧರಿಸುಯೆಂದು ನಮಿಪೆ
ಅದ್ರಿಜೆ ಕುಮಾರ ನಿರುತ ।೨।

ಸಿಂಧೂರ ವರದನ ಸುರವೃಂದ ವಂದಿತ ।
ವಂದಿಸಿ ಬೇಡುವೆ ಶ್ಯಾಮ-
ಸುಂದರನ ಪ್ರೀತಿಪಾತ್ರ ।೩।

ರಾ ಗ - ಪ ಂ ತು ವ ರಾ ಳಿ : ತಾ ಳ - ಅ ಟ ತಾ ಳ

ಅಂಬಾತನಯ ಹೇ ಹೇರಂಬ ।ಪ।

ಕರುಣಾಂಬುಧೆ ತವ ಚರಣಾಂಬುಜಕೆರಗುವೆ ।ಅ ಪ।

ದಶನ ಮೋದಕ ಪಾಶಾಂಕುಶ ಪಾಣಿ
ಅಸಮ ನೀ ಚಾರುದೇಷ್ಣ ವಂದಿಪೆ ।೧।

ವೃಂದಾರಕ ವೃಂದವಂದಿತ ಚರಣಾರ-
ವಿಂದಯುಗಳ ದಯದಿಂದ ನೋಡು ಎನ್ನ ।೨।

ಯೂಥಪ ವದನ ಪ್ರದ್ಯೋತ ಸನ್ನಿಭ ಜಗ
ನ್ನಾಥವಿಟ್ಠಲನ್ನ ಸಂಪ್ರೀತಿ ವಿಷಯ ಜಯ ।೩।

ರಾ ಗ - ಬೇ ಹಾ ಗ್ : ತಾ ಳ - ಆ ದಿ ತಾ ಳ

ಭುಜಗ ಭೂಷಣ ಕರುಣ । ಗಜಾನನ ।ಪ।



ಅಂಬರಕಭಿಮಾನಿ ಶಂಭುದೇವನ ಸುತ
ಇಂಬು ತೋರಿಸೊ ನೀ ವಿಶ್ವಂಭರನ ಸ್ಮರಣೆಗೆ ।೧।

ದಾಸವರ್ಯನೆ ವೇದವ್ಯಾಸರಿಗತಿಪ್ರಿಯ
ದಾಸನೆಂದೆನಿಸೆನ್ನ ಭೇಷ ಮೂರುತಿಯೆ ।೨।

ಮತಿಯ ಪಾಲಿಸು ಶ್ರೀಪತಿಯ ಸ್ತುತಿಗೆ ವಿಘ್ನ
ತತಿಯ ತಾರದೆ ಶುಭಮತಿಯ ಇತ್ತು ಸಲಹೊ ।೩।

ತತುವರೊಳಗೆ ಅತುಳ ಮಹಿಮನೆಂದು
ಪ್ರಥಮ ಕಾರ್ಯದಿ ನಿನ್ನ ನುತಿಸಿ ಬೇಡುವರು ।೪।

ಶ್ರುತಿಪಾದ್ಯ ಶ್ರೀ ವೆಂಕಟೇಶನ ದೂತ
ಹಿತರೆನಗಿಲ್ಲ ನೀ ಗತಿಯೆಂದು ನಂಬಿದೆ ।೫।

# ಶ್ರೀ ಷಣ್ಮುಖ ( ಕುಮಾರಸ್ವಾಮಿ – ಮನ್ಮಥ – ಸ್ಕಂಧ )



ಶ್ರೀ ಸುಬ್ರಹ್ಮಣ್ಯ – ಪಳನಿ

ಶ್ರೀವಿಷ್ಣುತೀರ್ಥಮುನಿಮಿತ್ರ ಸುರಾರಿಜೈತ್ರ
ಶ್ರೀಕೃಷ್ಣಪಜ್ಜಲಜಭೃಂಗ ಕೃತಾಘಭಂಗ
ಸಹ್ಯೇಶ ದೇಹಿ ಸಕಲೈರುಪಜೀವ್ಯಮನ್ನಂ
ಸಂಹರ್ತೃ ಸರ್ವಭುವನಸ್ಯ ಕುಮಾರ ಮಹ್ಯಂ

ಶ್ರೀಮದಾಚಾರ್ಯರ ತಮ್ಮಂದಿರಾದ ಶ್ರೀವಿಷ್ಣುತೀರ್ಥರು ಸುಬ್ರಹ್ಮಣ್ಯ-ದಲ್ಲಿ ಮಠವನ್ನು ಸ್ಥಾಪಿಸಿ ವಾಸಿಸುತ್ತಿದ್ದರು. ಚಿರಂಜೀವಿಗಳಾದ ವಿಷ್ಣುತೀರ್ಥ ಮುನಿಗಳಿಗೆ ಒಂದೇ ಸ್ಥಳದಲ್ಲಿ ವಾಸಮಾಡುತ್ತಿದ್ದ ಕಾರಣ ಸುಬ್ರಹ್ಮಣ್ಯನು ಸ್ನೇಹಿತನು. ಅಂತಹ ಮತ್ತು ತಾರಕಾಸುರ ಸಂಹಾರಕನಾದ ಪಾಪನಾಶಕನಾದ, ಶ್ರೀಕೃಷ್ಣನಲ್ಲಿ ಅತಿಶಯ ಭಕ್ತಿಯುಳ್ಳ, ಸಹ್ಯಾದ್ರೀಶನಾದ ಎಲೈ ಸುಬ್ರಹ್ಮಣ್ಯನೇ ! ನೀನು 'ಆದ್ಯಚೇಽತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತ ಇತಿ' ಎಂಬ ಶ್ರುತಿಗನುಸಾರವಾಗಿ ಸಮಸ್ತಭೂತಗಣಗಳಿಂದಲೂ ಆಶ್ರಯಿಸಲ್ಪಡುವ ಪ್ರಯುಕ್ತ ಮತ್ತು ಸಂಹಾರಕನಾದ ಪ್ರಯುಕ್ತ ಅನ್ನಶಬ್ದವಾಚ್ಯನಾದ ನಾರಾಯಣಾಖ್ಯ ಪರಬ್ರಹ್ಮವನ್ನು (ಅನ್ನವನ್ನು) ನನಗೆ ಕೊಡು. ನೀನು ಅನ್ನವನ್ನು ಕೊಡುವವನಾದುದರಿಂದ ನಿನ್ನಲ್ಲಿ ಅನ್ನವನ್ನೇ, ಬೇಡಿದ್ದೇನೆ – ಎಂದು ಭಾವವು. ಶ್ರೀಹರಿಯ ಅಪರೋಕ್ಷವನ್ನು ನನಗೆ ಉಂಟು ಮಾಡು ಎಂದು ತಾತ್ಪರ್ಯವು

(ಶ್ರೀ ವಾದಿರಾಜ ಯತಿ ಕೃತ ತೀರ್ಥ ಪ್ರಬಂಧ)



ಶ್ರೀ ಸುಬ್ರಹ್ಮಣ್ಯ – ಮಂಜೇಶ್ವರ

ರಾ ಗ – ಮು ಖಾ ರಿ : ತಾ ಳ – ತ್ರಿ ಪು ಟ ತಾ ಳ

ಧೀರಕುಮಾರ ಮಾರಾವತಾರ । ಪಾಹಿ ತ್ರ್ಯಂಬಕನ ಕುಮಾರ । ಪ ।

ತಾರಕಾಸುರ ಸಂಹಾರ । ದೇವ । ನಿನ್ನಲಿ ದೇವಸೈನ್ಯದ ಭಾರ ।
ಗಿರಿಜಾದೇವಿಯ ಮೋಹದ ಕುವರ ।
ಪೊರೆಯೊ ಎನ್ನನು ಕರುಣಾಸಾಗರ । ೧ ।

ಅಮರಸೇನೆಗೆ ನೀನಗ್ರೇಸರ । ಭೂಸುರ ಹತ್ಯಾ ಪಾಪ ಸಂಹಾರ
ಸಮರದೊಳಗೆ ನೀನು ಶೂರ ।
ನಮಿಸುವರಿಗಿಷ್ಟ ಫಲವೀವ ವೀರ । ೨ ।

ವಿಪ್ರಜನರಿಗತಿ ಪ್ರೀಯ । ವಲ್ಲಿಸೇನೆಗೆ ಪ್ರಾಣಪ್ರಿಯ ।
ವ್ಯಾಪ್ತ ರಾಜೇಶಹಯಮುಖನ ।
ಚಕ್ರಾಭಿಮಾನಿ ಮೂರುತಿಯಾಗುತಿರುವಿ । ೩ ।



ಶ್ರೀ ಸುಬ್ರಹ್ಮಣ್ಯ-ಕುಕ್ಕೆ

ರಾ ಗ - ಸು ರ ಭಿ : ತಾ ಳ - ಆ ದಿ ತಾ ಳ

ಕುಕ್ಕೆ ಸುಬ್ರಹ್ಮಣ್ಯ ನಿನ್ನ ಮೊರೆಹೊಕ್ಕೆ ದ್ವಿಜ ಶರಣ್ಯ । ಪ ।

ದುಃಖಭವ ಸಮುದ್ರಕ್ಕೆ ಪ್ಲವನೆ ನಿ
ರ್ಲಕ್ಷಿಸದೆನ್ನನು ತಕ್ಷಣ ಕಾಯೋ । ಅ ಪ ।

ವಾಸುಕಿ ಕಶ್ಯಪಾನಾದೇಶದಿ ಧ್ಯಾಸದೊಳಿರೆ ಶಿವನಾ
ಭಾಷೆವೊಲಹಿಭವ ನಾಶಕವೆನಿಸಲು
ಕೇಸರಿ ಕುಧರ ನಿವಾಸನೆಂದೆನಿಸಿದೆ । ೧ ।

ತಾರಕ ಕ್ರತುಭುಜರಾ ಹಿಂಸಿಸೆ ಮಾರಹರನ ಕುವರಾ
ಘೋರ ದಿತಿಜ ಸಂಹಾರ ದಿವಿಜ ರಣ
ಧೀರ ಷಣ್ಮುಗ ನಿವಾರಿಸಿದೆಯೊ ಭಯ । ೨ ।

ಸುಬ್ರಹ್ಮಣ್ಯಸ್ವಾಮಿ ಉನ್ಮಾದ ಭ್ರಮಹರ ಪ್ರೇಮಿ
ವಿಭ್ರಾಮಿತರನು ಶುಭ್ರಗೈಸಿ ಜೀ
ವಬ್ರಹ್ಮೈಕ್ಯದ ದುರ್ಭ್ರಾಂತಿಯ ಕಳೆ । ೩ ।

ಮಾರ್ಗಶಿರದ ಶುದ್ಧ ಷಷ್ಠಿ ಸುರರ್ಗಳಿಗನವದ್ಯ
ನಿರ್ಗತ ಮದದಿ ಭೂಸ್ವರ್ಗಜರುಚ್ಚಿಷ್ಠ
ವರ್ಗದೊಳುರುಳಲು ದುರ್ಗತಿ ಕಳೆವರು । ೪ ।

ಕಾಮರೂಪದೇವ ದೈತ್ಯವಿರಾಮ ಯಶೋವಿಭವ
ಧೀಮತ ಮಧ್ವ ಸಪ್ರೇಮ ಸಹಜ ವಿಷ್ಣು
ನಾಮತೀರ್ಥ ಚಿದ್ಧಾಮ ಮನೋಹರ ।೫।

ತ್ರಿಪಥಗಾಮಿಕುವರಾ–ಧಾರೆಯೊಳುಪಚರಿಸುತಲಿಹರಾ
ಸ್ವಪನಕಾಲದಲು ಅಪಮೃತ್ಯಾದಿಗ
ಳುಪಟಳಿಲ್ಲ ಬಹು ತಪಸಿನ ಫಲವಿದು ।೬।

ಸ್ಕಂದ ಪರಮ ಗುರುವೇ ನತಜನ ಬೃಂದ ಕಲ್ಪತರುವೇ
ತಂದೆವೆಂಕಟೇಶವಿಟ್ಠಲಾತ್ಮಜ ಮಾ
ನಂದಾಗಮದನುಸಂಧಾನದೊಳಿಡೋ ।೭।


ಉಡುಪಿಯ ಕೃಷ್ಣನಿಗೆ ಸುಬ್ರಹ್ಮಣ್ಯನ ಅಲಂಕಾರ

ರಾಗ – ಭೈರವಿ : ತಾಳ – ಆದಿತಾಳ


ಪಾಲಿಸೊ ಕುಮಾರ ಪಾಲಿಸೊ
ನಿನ್ನ ಚಾರು ಚರಣಕ್ಕೆ ನಾ ನಮಿಪೆ ಕೃಪಾಕರ ।ಪ।

ಸುಂದರಾನನ ಗೋವಿಂದಸುತನೆ
ಸ್ಕಂದ ಸುಂದರಾಂಗ ಕಾಮ ಪ್ರದ್ಯುಮ್ನನೆ
ಇಂದಿರೇಶನ ದಯ ತಂದು ನೀ ಒದಗಯ್ಯ
ವಂದಿಪೆ ನಿನ್ನರವಿಂದ ಪಾದಕೆ ನಾ ।೧।

ಶೂರ ಪದುಮಾದಿ ಅಸುರರನೆಲ್ಲ ನೀ
ಮುರಿದು ಪೊರೆದೆಯೊ ಮೂರು ಜಗವ ಎನ್ನ
ಘೋರಬಾಧೆಗಳನ್ನು ತರಿದು ನೀ ಪೊರೆಯಯ್ಯ
ಧೀರ ಉದಾರನೆ ಸುರಸೇನಾಧಿಪ ।೨।

ಸೋಮವದನ ಉಮೇಶಸುತ ಗುಹ
ಪ್ರೇಮದಯದಿ ಭ್ರಮಾಕಲುಷ ಕೀಳೊ
ಬೊಮ್ಮನತಾತ ಪ್ರಸನ್ನಶ್ರೀನಿವಾಸ
ವಾಮನ ಶ್ರೀಶನ ಪ್ರೇಮ ಸುಪಾತ್ರನೆ ।೩।

## ಶ್ರೀ ಪಾ ರ್ವ ತಿ ದೇ ವಿ ಯ ರು



ಉತ್ಪಾದಯಂಸ್ತ್ವಯಿ ಸುತೌ ಗಿರಿಜೇ ಗಿರೀಶಃ
ಸೌಂದರ್ಯಭಂಗಜಭಿಯೇವ ಭವೋ ಭವತ್ಯಾಃ ।
ಕಾಮಾಕ್ಷಿ ವಿಘ್ನಹರಮೇಕಮಸಾವಕಾರ್ಷೀತ್
ಷಾಣ್ಮಾತುರಂ ತ್ವಪರಮಂಗಜಭಂಜಕೋಽಪಿ ॥

ಎಲೈ ಹಿಮವತ್ಪುತ್ರಿಯಾದ ಕಾಮಾಕ್ಷಿಯೇ, ಈ ಶಿವನು ತನ್ನ ಸಮಾಧಿಗೆ ವಿಘ್ನಕರನಾದ ಮನ್ಮಥನನ್ನು ಹಣೆಗಣ್ಣಿನಿಂದ ಸುಟ್ಟು ಹಾಕಿದರೂ ಕೂಡ ನಿನ್ನಲ್ಲಿ ವಿಘ್ನೇಶ ಮತ್ತು ಷಣ್ಮುಖರೆಂಬ ಇಬ್ಬರು ಮಕ್ಕಳನ್ನು ಪಡೆದಿದ್ದಾನೆ. ಆದರೆ 'ಪ್ರಸವಾಂತಂ ಚ ಯೌವನಂ' ಎಂಬ ನುಡಿಯನ್ನು ಅನುಸರಿಸಿ ಯೌವನದ ಲಾವಣ್ಯವು ಮಕ್ಕಳನ್ನು ಪಡೆಯುವುದರಿಂದ ನಶಿಸಿ ಹೋಗಬಹುದೆಂಬ ಭಯದಿಂದಲೋ ಎಂಬಂತೆ ಒಬ್ಬ ಮಗನನ್ನು ವಿಘ್ನಹರನನ್ನಾಗಿ ಮಾಡಿದ್ದಾನೆ. ಎಲ್ಲರ ವಿಘ್ನವನ್ನೂ ಪರಿಹರಿಸುವ ಗಣೇಶನು ತಾಯಿಯ ಯೌವನಕ್ಕೆ ಬರುವ ವಿಘ್ನಗಳನ್ನು ಪರಿಹರಿಸುವುದಿಲ್ಲವೇ? ಮತ್ತೊಬ್ಬ ಮಗನನ್ನು ಷಾಣ್ಮಾತುರ ಅಂದರೆ ಆರುಮಂದಿ ತಾಯಂದಿರು ಉಳ್ಳವನನ್ನಾಗಿ ಮಾಡಿದನು. ಮಗುವು ಸ್ತನ್ಯಪಾನಮಾಡಿದರೆ ಸ್ತನಗಳು ಶಿಥಿಲವಾಗಿ ಸೌಂದರ್ಯವು ಕಡಿಮೆಯಾದೀತೆಂಬ ಭಯದಿಂದಲೋ ಎಂಬಂತೆ ಆರು ಮಂದಿ ಕೃತ್ತಿಕಾ ದೇವತೆಗಳಿಂದ ಮಗುವಿಗೆ ಸ್ತನ್ಯಪಾನಮಾಡಿಸಿ ಬೆಳೆಸಿದನು. ಹೀಗೆ ವಿರಕ್ತನಾದ ಈಶ್ವರನಿಗೂ ಅನುರಾಗವನ್ನುಂಟುಮಾಡಿದ ಕಾಮಾಕ್ಷಿಯೆಂಬ ಹೆಸರುಳ್ಳ ಗಿರಿಜೆಯ ಸೌಂದರ್ಯ ಅದ್ಭುತವಾದುದು.

(ಶ್ರೀ ವಾದಿರಾಜಯತಿಕೃತ ತೀರ್ಥಪ್ರಬಂಧ)



ರಾ ಗ – ನಾ ಗ ಸ್ವ ರಾ ವ ಳಿ : ತಾ ಳ – ಆ ದಿ ತಾ ಳ

ಉಮಾದೇವಿಯೆ ನಿನ್ನ ನಮಿಪೆ
ಚರಣಕಮಲವ ತೋರಮ್ಮ ನಮ್ಮಮ್ಮಾ । ಪ ।

ಮನೋಭಿಮಾನಿಯೇ ಎನ್ನವಗುಣಗಳೆಣಿಸದೆ ತ್ವರಿತದಿ
ಬಂದು ಮುತ್ತಿನ ಗದ್ದಿಗೆಯನೇರಮ್ಮ ನಮ್ಮಮ್ಮಾ । ಅ ಪ ।

ದಕ್ಷಕುವರಿ ದಾಕ್ಷಾಯಿಣಿ ಗೌರಿ ಪಕ್ಷಿವಾಹನನ ಸೋದರಿ
ಈಕ್ಷಿಸುತಿರುವೆನು ಉಪೇಕ್ಷಿಸದೆ ಎನ್ನ
ರಕ್ಷಿಸಿ ಕಾಯೆ ಪಾರ್ವತಿ ತಾಯೆ । ೧ ।

ಶಂಭುದೇವನ ರಾಣಿ ಹೃದಯಾಂಬರದೊಳು
ಬಿಂಬವ ತೋರೆ ಜಗದಾಂಬ ಪೂಜಿತೆ
ನಂಬಿದ ಭಕ್ತರ ಪೊರೆವ ಸದ್ಗುಣ ಚರಿತೆ । ೨ ।

ಗೆಜ್ಜೆ ಪಾದಗಳಿಂದ ಘಲ್ ಘಲ್ ಎನುತ ಬಾರಮ್ಮ
ಹೆಜ್ಜೆಯನಿಡುತ ಮುಗುಳ್ನಗೆ ನಗುತ ಬಾರಮ್ಮ
ಸುಜ್ಞಾನ ಮತಿಯಿತ್ತು ಕಾಯುವ ತಾಯಿ ಬಾರಮ್ಮ । ೩ ।

ಉಟ್ಟ ಪೀತಾಂಬರ ತೊಟ್ಟ ಪಟ್ಟೆಯ ಪದಕ
ಕಟ್ಟಿದ ಕಠಾಣಿ ಮುತ್ತಿನಮೂಗುತಿ ಪಚ್ಚೆಯ ಓಲೆ
ಇಟ್ಟ ಕಸ್ತೂರಿತಿಲಕ ಕೆತ್ತಿದ ಕಿರೀಟ ಹೊಳೆಯುತ । ೪ ।

ಬೇಡಿಕೊಂಬೆವೆ ತಾಯೆ ನೀ ಎನ್ನ ಆಪತ್ತು ಪರಿಹರಿಸಿ
ಪಾಡಿ ಪೊಗಳಿ ಕೊಂಡಾಡುವೆ ಕಾಯೆ ತಾಯೆ
ಬೇಡಿದ ವರಗಳ ರುಕ್ಮಿಣೀಶವಿಟ್ಠಲನ ಕರುಣದೆ ನೀಡೆ ತಾಯೆ । ೫ ।

ರಾ ಗ – ಪ ಂ ತು ವ ರಾ ಳಿ : ತಾ ಳ – ಆ ದಿ ತಾ ಳ

ಪಾರ್ವತಿ ಪಾಲಿಸೆನ್ನ । ಮಾನಿನಿರನ್ನೆ ।
ಪಾರ್ವತಿ ಪಾಲಿಸೆನ್ನ । ಪ ।

ಪಾರ್ವತಿ ಭಕುತರ ಸಾರಥಿ ವಂದಿಪೆ
ಸುರಪತಿ ಗಜಮುಖಮೂರುತಿ ಮಾತೆ । ಅ ಪ ।

ಮನದಭಿಮಾನಿಯೆ ನೆನೆವೆನು ನಿನ್ನನು
ಅನುಕರಿಸೆನ್ನನು ಅಂಬುಜಪಾಣಿ । ೧ ।

ಮಂಗಳೆ ಮೃಡನಂತರಂಗಳೆ ಹರಿಪದ
ಭೃಂಗಳೆ ತುಂಗಳೆ ಪನ್ನಗವೇಣಿ । ೨ ।

ಗುಣಪೂರ್ಣ ವೇಣುಗೋಪಾಲವಿಟ್ಠಲನ್ನ
ಕಾಣಿಸಿ ಕೊಡುವಂಥ ಶೂಲಿಯ ರಾಣಿ । ೩ ।

